ವಿಜಯಪುರ | ಸಂಪುಟ 04 | ಸಂಚಿಕೆ 218 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಅಕ್ಟೋಬರ್ 23, 2026



"ಆರೆಸ್ಸೆಸ್ ಮಾಹಿತಿ ಕೊಟ್ರೆ ಸಾಲದು, ಅನುಮತಿ ಕೇಳಬೇಕು ಎಂದು ಪ್ರಿಯಾಂಕ್ ಖರ್ಗೆ ಹೇಳ್ತಾರೆ. ಆದ–'ರೆ ಮೊನ್ನೆ ಈದ್ ಮಿಲಾದ್ ಆಯಿತು. ಆಗ ಪರ್ಮಿಷನ್ ತೆಗೆದುಕೊಂಡ್ರಾ ಆರ್‌ಎಸ್‌ಎಸ್ ಮತ್ತು ಹಿಂದೂ ಅಂದ್ರೆ ಖರ್ಗೆ ಅವರಿಗೆ ಅಲರ್ಜಿ. ಸಂಬಂಧಿಸಿದಂತೆ ಗೃಹ ಸಚಿವರು ತಮ್ಮ ವ್ಯಾಪ್ತಿ ಮೀರಿ ಮಾತನಾಡುತ್ತಿದ್ದಾರೆ."

■ ಬಸನಗೌಡ ಪಾಟೀಲ್ ಯತ್ನಾಳ್
ವಿಜಯಪುರ ಶಾಸಕರು



ರೈತರು ಮತ್ತು ಹೆಸ್ಕಾಂ ಸಿಬ್ಬಂದಿ ನಡುವೆ ವಾಗ್ವಾದ । ಪ್ರತಿಭಟಿಸಿದ ರೈತರು

## ಹೆಸ್ಕಾಂ ಸಿಬ್ಬಂದಿಯಿಂದ ರೈತರ ಪಂಪಸೆಟ್ಟು ವಾಯರ್ ಕಟ್

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಸಾಲೋಟಗಿ ಗ್ರಾಮದ ಮತ್ತು ಇಂಡಿಂ–ರು ಮುಖ್ಯ ಕೃಷ್ಣಾ ಕಾಲುವೆಯ ಇರುವ ಸಾಲೋಟಗಿ ಹತ್ತಿರದ ರೈತರ ಕೃಷ್ಣಾ ಕಾಲುವೆ ಮೇಲಿರುವ ಪಂಪಶೆಟ್ಟುಗಳ ವಾಯರ್ ಕಟ್ ಮಾಡಲು ಹೆಸ್ಕಾಂ ಸಿಬ್ಬಂದಿ ಪ್ರಾರಂಬಿಸಿತು.

ಇದಕ್ಕೆ ಪ್ರತಿಭಟಿಸಿದ ರೈತರು ನೂರಾರು ಸಂಖ್ಯೆಯಲ್ಲಿ ಸೇರಿ ಹೆಸ್ಕಾ ಸಿಬ್ಬಂದಿ ಮೇಲೆ ಹಲ್ಲೆ ಮಾಡುವದಾಗಿ ತಾಕೀತು ಮಾಡಿದರು.

ಹೆಸ್ಕಾ ಸಿಬ್ಬಂದಿ ತಮ್ಮ ಹೆಚ್ಚಿನ ಸಿಬ್ಬಂದಿ ಮತ್ತು ಮೇಲಾಧಿಕಾರಿಗಳನ್ನು ಕರೆದರು.

ಸ್ಥಳಕ್ಕೆ ಆಗಮಿಸಿದ ಹೆಸ್ಕಾ ಮೇಲಾಧಿಕಾರಿಗಳು ಕಾಲುವೆಯ ನೀರು ಕೇವಲ ಕುಡಿಯಲು ಮಾತ್ರ ಬಿಡುತ್ತಿದ್ದು ರೈತರು ಕೃಷಿಗೆ ಉಪಯೋಗಿಸಬಾರದು ಎಂದು ಹಠ ಹಿಡಿದರು. ಆಗ ರೈತರು ಈಗಾಗಲೇ ಮುಂಗಾರು ಬೆಳೆ ವಿಫಲ ಗೊಂಡಿದೆ. ಮೆಕ್ಕೆಜೋಳ ಹತ್ತಿ ತೊಗರಿ ಕಬ್ಬು ಸೇರಿದಂತೆ ಇನ್ನಿತರ ಬೆಳೆ ಸಂಪೂರ್ಣ ವಿಫಲಗೊಂಡಿದ್ದು ನೀವು ಕುಡಿಯಲು ನೀರು ಕೊಡಿ ನಮ್ಮದೇನೂ ಅಭ್ಯಂತರವಿಲ್ಲ, ಆದರೆ ಕೃಷಿಗೆ ನೀರು ಕೊಡಬೇಕು. ಕೇವಲ ವಿಜಯಪೂರ ಜಿಲ್ಲೆಗೆ ಮಾತ್ರ ವಾರಾಬಂದಿ ಮಾಡಿ ಕಲಬುರಗಿ ಯಾದಗಿರ ಸುರಪುರ ರೈತರಿಗೆ ವಾರಾಬಂದಿ ಇಲ್ಲ ಭೂಮಿಯಲ್ಲಿ ತೇವಾಂಶ ಕೊರತೆ ಇದೆ. ಕಾಲುವೆಯ ಸ್ವಲ್ಪ ನೀರು ಬಿಟ್ಟು ಬಿತ್ತಲು ಅನುಕೂಲವಾಗುತ್ತದೆ ಎಂದು ಪಟ್ಟು ಹಿಡಿದರು. ತಾಲೂಕಿನಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ಹೇಕ್ಟರ ಪ್ರದೇಶದಲ್ಲಿ ಹಿಂಗಾರು ಬಿತ್ತನೆ ಯಾಗಬೇಕು. ನಿಜ ಸ್ಥಿತಿಯಲ್ಲಿ ಕೇವಲ ಎಂಟು ಸಾವಿರ ಹೇಕ್ಟರ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ ಎಂದು ಪಟ್ಟು ಹಿಡಿದರು. ಸ್ಥಳಕ್ಕೆ ಸಿಪಿಐ ಸುನೀಲ ಪಾಟೀಲ ಮತ್ತು ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಭೇಟಿ ನೀಡಿ ಪರಿಸ್ಥಿತಿ ತಿಳಿಗೊಳುವಲ್ಲಿ ಸಾಕಷ್ಟು ಪ್ರಯತ್ನಿಸಿದರು. ಆದರೂ ರೈತರು ಹೆಸ್ಕಾ ಸಿಬ್ಬಂದಿ ಮತ್ತೆ ಬಂದರೆ ಸಾಮೂಹಿಕ ಹಲ್ಲೆ ಮಾಡುವದಾಗಿ ಪಟ್ಟು ಹಿಡಿದಿದ್ದಾರೆ.

"ಕಳೆದ ಮೂರು ದಿನಗಳಿಂದ ಕಾಲುವೆಗೆ ನೀರು ಬರುತ್ತಿದ್ದು ಹೆಸ್ಕಾಂ ಇಲಾಖೆಯವರು ರೈತರ ವಿದ್ಯುತ್ ವಾಯರ್ ಕಟ್ ಮಾಡುವ ನೆಪದಲ್ಲಿ ಕೇವಲ ಮೂರು ಗಂಟೆ ವಿದ್ಯುತ್ ನೀಡುತ್ತಿದ್ದು ಇತ್ತ ರೈತರಿಗೆ ನೀರು ಪಡೆಯುವುದು ಆಗುತ್ತಿಲ್ಲ. ಹೆಸ್ಕಾಂ ಮತ್ತು ಕೃಷ್ಣಾ ಇಲಾಖೆಯವರು ಕಂದಾಯ ಇಲಾಖೆ ರೈತರ ಜೊತೆ ಚೆಲ್ಲಾಟ ವಾಡುತ್ತಿದ್ದಾರೆ. ಹೀಗೆ ಪರಿಸ್ಥಿತಿ ಮುಂದುವರೆದರೆ ರೈತರು ಬೀದಿಗೆ ಇಳಿದು ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಬೇಕಾಗುತ್ತಿದೆ."

■ ಕಾಸುಗೌಡ ಬಿರಾದಾರ ಬಿಜೆಪಿ ಜಿಲ್ಲಾ ಮಾಜಿ ರೈತ ಮೋರ್ಚಾ ಅಧ್ಯಕ್ಷರು

## ಸಚಿವ ಎಂ.ಬಿ.ಪಾಟೀಲರಿಂದ ಬನ್ನಿ ವಿನಿಮಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬನ್ನಿ ತಗೋಂಡು ಬಂಗಾರವಾಗೋಣ ಎನ್ನುವ ನಮ್ಮ ಗ್ರಾಮ್ಯದ ವಾಡಿಕೆಯಂತೆ ಇಂದು ಗುರುವಾರ ತಮ್ಮ ಗೃಹ ಕಚೇರಿಯಲ್ಲಿ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲರು ಕ್ಷೇತ್ರದ ಜನ, ಜಿಲ್ಲೆಯ ಮುಖಂಡರು ಮತ್ತು ಜನತೆಯ ಜೊತೆಗೆ ಇಡೀ ದಿನ ಬನ್ನಿ ವಿನಿಮಯ ಮಾಡಿಕೊಂಡು ಶುಭ ಹಾರೈಸಿದರು. ಜಿಲ್ಲೆಯ ಹಲವು ಭಾಗಗಳಿಂದಲ್ಲದೇ ಪಕ್ಕದ ಬೆಳಗಾವಿ, ಬಾಗಲಕೋಟೆ ಜಿಲ್ಲೆಯವರೂ ಕೂಡ ಈ ಉತ್ಸಾಹದಲ್ಲಿ ಭಾಗಿಯಾದರು.

ವಿಶೇಷವಾಗಿ ಸಚಿವರ ಸ್ವಕ್ಷೇತ್ರದ ಜನ ಹಾಗೂ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಮಹಿಳೆಯರು, ರೈತಾಪಿ ವರ್ಗ, ಸಂಘಟನೆಗಳವರು ಹಾಗೂ ವಿಶೇಷ ಚೇತನರು ಸೇರಿ ಸಾವಿರಾರು ಜನ ಸಚಿವರನ್ನು ಭೇಟಿಯಾಗಿ ವಿಜಯ ದಶಮಿಯ ಶುಭಾಶಯಗಳನ್ನು ಕೋರಿದರು.

ಬಂದಿದ್ದವರೊಂದಿಗೆ ಅನ್ಯೋನ್ಯತೆಯಿಂದ ಮಾತನಾಡಿದ ಅವರು, ಉಭಯ ಕುಶಲೋಪರಿ ವಿಚಾರಿಸುತ್ತ ಬರ್ಲಿ ಎಂದು ಎಲ್ಲರಿಗೂ ಆಸ್ಥೆಯಿಂದ ಬನ್ನಿಯನ್ನು ನೀಡಿದರು. ಜತೆಗೆ ಎಲ್ಲೆಡೆ ಮಳೆಯಾಗದ ಸ್ಥಿತಿ, ಗಿಡ ನೆಡಬೇಕು ಎನ್ನುವ ಸಲಹೆಗಳ ಮಾತುಗಳನ್ನೂ ರೈತರೊಂದಿಗೆ ಆಡುತ್ತಿದ್ದರು. ಜನರ ಒತ್ತಡದ ನಡುವೆಯೂ ಕೆರೆಗೆ ನೀರಿಲ್ಲ, ನಮ್ಮ ಕೆನಾಲ್‌ಗೆ ನೀರು ಬಿಟ್ಟಿಲ್ಲ ಎನ್ನುವ ಮನವಿಗಳಿಗೂ ಸ್ಪಂದಿಸುತ್ತಿದ್ದದ್ದು ಅವರ ನೀರಾವರಿ ಎಡೆಗಿನ ಕಾಳಜಿಯ ವಿಶೇಷತೆ ತೋರಿಸುತ್ತಿತ್ತು.

ಹಲವು ಹಾಲಿ, ಮಾಜಿ ಶಾಸಕರಾದಿಯಾಗಿ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪದಾಧಿಕಾ–ರಿಗಳು, ಸಿಬ್ಬಂದಿ ಸಚಿವರನ್ನು ಭೇಟಿಯಾಗಿ ಹಬ್ಬದ ಸಡಗರಕ್ಕೆ ಸಾಕ್ಷಿಯಾದರು.

## ಕೆರೆಗಳ ಭರ್ತಿಗೆ ಕೆಬಿಜೆಎನ್‌ಎಲ್ ಅಧಿಕಾರಿಗಳಿಗೆ ರೈತರ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಕೃಷಿ ಚಟುವಟಿಕೆ ಹಾಗೂ ಕುಡಿಯುವ ನೀರಿನ ಅನುಕೂಲಕ್ಕಾಗಿ ಚಿಮ್ಮಲಗಿ ಮುಖ್ಯಕಾಲುವೆಯ ನಾಗಠಾಣ ಉಪಕಾಲುವೆಗೆ ನೀರು ಹರಿಸಿ ಈ ಭಾಗದ ಕೆರೆಗಳ ಭರ್ತಿಗೆ ಕೆಬಿಜೆ–ಎನ್‌ಎಲ್ ಅಧಿಕಾರಿಗಳು ಆಸಕ್ತಿ ವಹಿಸಿ ಕೂಡಲೇ ಕ್ರಮಕೈಗೊಳ್ಳಲು ಮುಂದಾಗಬೇಕು ಎಂದು ರೈತರು, ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಮಂಗಳವಾರ ಪತ್ರಿಕೆಯೊಂದಿಗೆ ನಿವಾಳಖೇಡ ಗ್ರಾಮದ ರೈತ ಚನ್ನಪ್ಪ ಕಾರಜೋಳ ಹಾಗೂ ಬಸವರಾಜ ಕಲ್ಲೂರ(ಮುಳಸಾವಳಗಿ) ಮಾತನಾಡಿ, ತಾಲ್ಲೂಕಿನಲ್ಲಿ ಹರಿಯುವ ಮುಳವಾಡ ಏತ ನೀರಾವರಿ ಕಾಲುವೆಗೆ ನೀರು ಹರಿಸಲಾಗುತ್ತಿದೆ. ಆದರೆ ತಾಲ್ಲೂಕಿನ ಗಂಗನಳ್ಳಿ ಗ್ರಾಮದವರೆಗೆ ನೀರು ಸಂಪರ್ಕಿಸುವ ನಾಗಠಾಣ ಉಪಕಾಲುವೆಣಟಿ–ಜಜಜಿಟಿಜಜ ನೀರು ಹರಿಯದೇ ಭಣಗುಡುತ್ತಿದೆ. ಈ ಕಾಲುವೆಯ ನೀರಿನ ಮೇಲೆ ಅವಲಂಬಿತವಾದ ಕೃಷಿಕರು ವ್ಯವಸ್ಥೆಯ ತಾರತಮ್ಯ ನೀತಿಯಿಂದ ನೀರಿಗಾಗಿ ಪರಿತಪ್ಪಿಸುವಂತಾಗಿದೆ. ಚಿಮ್ಮಲಗಿ ಏತ ನೀರಾವರಿಯ ನಾಗಠಾಣ ಉಪಕಾಲುವೆಯಲ್ಲಿ ಸುಮಾರು 146 ಕಿ.ಮೀ ನೀರು ಹರಿಯಬೇಕು. ಆದರೆ ಕಾಲುವೆ ಹಾದು ಬರುವ ಹಂತಗಳಲ್ಲಿ ಕೆಲವು ರೈತರು ಕಲ್ಲು, ಗರಸು ಹಾಕಿ ನೀರು ನಿಲುಗಡೆ ಮಾಡಿದ ಉದಾಹರಣೆಗಳಿವೆ. ಜೊತೆಗೆ ಮೋಟಾರ್‌ಗಳ ಮೂಲಕ ಸತತ ನೀರು ಪಡೆಯುವುದರಿಂದ ಕೊನೆಯ ಹಂತದವರೆಗೆ ನೀರು ತಲುಪುತ್ತಿಲ್ಲ. ಪ್ರತಿ ವರ್ಷ ಈ ಕುರಿತು ಮಾಧ್ಯಮಗಳ ಮೂಲಕ ಗಮನ ಸೆಳೆದರೂ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಲುವೆಗಳಿಗೆ ನೀರು ಬಂದರೆ ಕೆರೆ ಹಳ್ಳಗಳು, ಕೊಳವೆಭಾವಿ, ಭಾವಿಗಳು ಭರ್ತಿಯಾಗಿ ರೈತರಿಗೆ ಅನುಕೂಲವಾಗಲಿದೆ. ಕಾಲುವೆಗಳಿಗೆ ನೀರು ಬಂದರೂ ಕೊನೆಯವರೆಗೆ ತಲುಪದೇ ಇರುವುದು ರೈತರಿಗೆತೊಂದರೆಯಾಗಿದೆ. ಇದರಿಂದರೈತರುಗೂಳೆ ಹೋಗುವಂತಾಗಿದೆ. ತಕ್ಷಣವೇ ದೇವರಹಿಪ್ಪರಗಿ–ಗಂಗನಳ್ಳಿ ನಡುವಿನ ಕಾಲುವೆಗೆ ನೀರು ಹರಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಲಲಿತಾಬಾಯಿ ದಳವಾಯಿ, ಶಿವನಗೌಡ ಪಾಟೀಲ, ರಮೇಶ ಕಲ್ಲೂರ, ಲಕ್ಷ್ಮೀಕಾಂತ ಇಂಡಿ, ಬಸವರಾಜ ಕೋಣ್ಣೂರ, ಈರಣ್ಣ ದೇಸಾಯಿ, ಸಿದ್ದು ಕಾರಜೋಳ, ಅನೀಲ ಮಸೂತಿ, ಶಿವಶರಣ ಮುಳಸಾವಳಗಿ, ಬಸವರಾಜ ಬೊಮ್ಮನಳ್ಳಿ(ಮುಳಸಾವಳಗಿ) ಯಮನೂರಪ್ಪ ಸಾತಿಹಾಳ(ಇಂಗಳಗಿ), ಸಾಹೇಬಗೌಡರೆಡ್ಡಿ(ಕಡ್ಲೇವಾಡ ಪಿಸಿಎಚ್) ಶ್ರೀಮಂತ ತಳವಾರ (ನಿವಾಳಖೇಡ), ಸೇರಿದಂತೆ ವಿವಿಧ ಗ್ರಾಮಗಳ ರೈತರು ಆಗ್ರಹಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘಟನೆ ಪದಾಧಿಕಾರಿಗಳೊಂದಿಗೆ ಆರೋಗ್ಯ ಸಚಿವ ಯು.ಟಿ. ಖಾದರ್ ಸಭೆ । ಚಿಕಿತ್ಸಾ ದರ ಪಟ್ಟಿ ಪ್ರದರ್ಶನ ಕಡ್ಡಾಯ!

# ರಾಜ್ಯದ ಖಾಸಗಿ ಆಸ್ಪತ್ರೆಗಳ ಬಿಲ್ ಗೆ ಅಂಕುಶ!



ಬೆಂಗಳೂರು: ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಬೇಕಾಬಿಟ್ಟಿಯಾಗಿ ವಿಧಿಸುವ ಬಿಲ್ ಗೆ ಅಂಕುಶ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮುಂದಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚ ಮಾತ್ರವಲ್ಲದೆ ಇನ್ಮುಂದೆ ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ನೀಡಲಾಗದ 'ಶೆಡ್ಯೂಲ್ಡ್ ಔಷಧ'ಗಳ ದರಪಟ್ಟಿಯನ್ನೂ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ.

ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘಟನೆ (PHANA – ಫನಾ) ಪದಾಧಿಕಾರಿಗಳೊಂದಿಗೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಹತ್ವದ ಸಭೆ ನಡೆಸಿದ ಆರೋಗ್ಯ ಸಚಿವ ಯು.ಟಿ. ಖಾದರ್, ಆಸ್ಪತ್ರೆಗಳ ಸುಲಿಗೆ ಪ್ರವೃತ್ತಿ ಮತ್ತು ಅತಿಯಾದ ದರ ವಸೂಲಿ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದರು.

ಕ್ಯಾನ್ಸರ್ ಚಿಕಿತ್ಸೆಯ ಔಷಧಗಳ ದರ ಅತಿಯಾಗಿ ಏರಿಕೆಯಾಗಿದ್ದು, ರೋಗಿಗಳಿಂದ ಸುಲಿಗೆ ಮಾಡುತ್ತಿರುವುದನ್ನು ಔಷಧ ಆಡಳಿತ ಇಲಾಖೆ ನಡೆಸಿದ ತನಿಖೆಯಲ್ಲಿ ಕಂಡುಬಂದಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮತ್ತು ಔಷಧ ದರಗಳಲ್ಲಿ ಪಾರದರ್ಶಕತೆ ತರಲು ಸರ್ಕಾರ ಬದ್ಧವಾಗಿದೆ. ಅದೇ ರೀತಿ ಆಸ್ಪತ್ರೆಗಳು ನೀಡುವ ಚಿಕಿತ್ಸೆ ಹಾಗೂ ಖರೀದಿಸುವ ಔಷಧಗಳ ದರದಲ್ಲಿ ಪಾರದರ್ಶಕತೆ ಇರಬೇಕು. ಕಡಿಮೆ ದರದ ಲಾಭ ನೇರವಾಗಿ ರೋಗಿಗಳಿಗೆ ತಲುಪಬೇಕು ಎಂದು ಹೇಳಿದರು. ಖಾಸಗಿ ಆಸ್ಪತ್ರೆಗಳಲ್ಲಿ ಔಷಧಗಳಿಗೆ ಅಧಿಕ ದರ ವಿಧಿಸಿ ರೋಗಿಗಳನ್ನು ಶೋಷಿಸುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ ವ್ಯಕ್ತಪಡಿಸಿದೆ. ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರ ಈಗ ಬೆಲೆ ನಿಯಂತ್ರಣದ ಹೊರಗಿರುವ ಕ್ಯಾನ್ಸರ್ ಔಷಧಗಳ ವ್ಯಾಪಾರ ಲಾಭಾಂಶವನ್ನು ಗರಿಷ್ಠ ಚಿಲ್ಲರೆ ಬೆಲೆಯ ಶೇ.30ಕ್ಕೆ ಮಿತಿಗೊಳಿಸಿ ಅನುಮೋದನೆ ನೀಡಿದೆ. ಇದರಿಂದ ಕ್ಯಾನ್ಸರ್ ರೋಗಿಗಳ ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದು ಸಚಿವರು ತಿಳಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಚನ್ನಪ್ಪ ಕಟ್ಟಿ ಅಭಿಮತ । ಗೌರವ ಪ್ರಶಸ್ತಿ ಪ್ರದಾನ । ಪುಸ್ತಕ ಬಹುಮಾನ ವಿತರಣೆ ಸಮಾರಂಭ

# ಅನುವಾದದಿಂದಲೇ ಕನ್ನಡ ಸಾಹಿತ್ಯ–ಸಂಸ್ಕೃತಿ ಜಗತ್ತಿಗೆ ಪರಿಚಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕನ್ನಡ ಸಾಹಿತ್ಯ, ಭಾಷೆ ಹಾಗೂ ಸಂಸ್ಕೃತಿಯನ್ನು ದೇಶ–ವಿದೇಶಗಳಲ್ಲಿ ಪರಿಚಯಿಸುವಲ್ಲಿ ಅನುವಾದ ಕಾರ್ಯ ಪ್ರಮುಖ ಪಾತ್ರ ವಹಿಸಿದೆ ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಚನ್ನಪ್ಪ ಕಟ್ಟಿ ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೆಂಗಳೂರಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 2026ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಹಾಗೂ 2025ನೇ ಸಾಲಿನ ಪುಸ್ತಕ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು. ವಿವಿಧ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಹಾಗೂ ಕನ್ನಡದ ಕೃತಿಗಳನ್ನು ಇತರ ಭಾಷೆಗಳಿಗೆ ಅನುವಾದಿಸುವ ಮೂಲಕ ಭಾಷೆಗಳ ನಡುವಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸಬಹುದಾಗಿದೆ ಎಂದು ಹೇಳಿದರು.

ಹಿರಿಯ ಸಾಹಿತಿ ಡಾ. ಡಿ.ಎಸ್. ಚೌಗಲೆ ಅಧ್ಯಕ್ಷತೆ ವಹಿಸಿ, ವಂದನಾ ನುಡಿ ನುಡಿದರು.

ಗೌರವ ಪ್ರಶಸ್ತಿ ಪುರಸ್ಕೃತರಾದ ಡಾ. ಬಂಜಗೆರೆ ಜಯಪ್ರಕಾಶ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿ, ಸಾಹಿತ್ಯ ಕ್ಷೇತ್ರದಲ್ಲಿ ನೈಜ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುವುದು ಮಹತ್ವದ ಕಾರ್ಯವಾಗಿದೆ ಎಂದರು. ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಅನುವಾದ ಕಾರ್ಯ ಅತ್ಯಂತ ಅಗತ್ಯವಾಗಿದೆ. ಇತರ ಭಾಷೆಗಳಲ್ಲಿರುವ ಉತ್ತಮ ಸಾಹಿತ್ಯವನ್ನು ಕನ್ನಡಕ್ಕೆ ತರುವುದರಿಂದ ಕನ್ನಡ ಓದುಗರಿಗೆ ವಿವಿಧ ಭಾಷೆಗಳ ಸಾಹಿತ್ಯದ ಪರಿಚಯವಾಗುತ್ತದೆ. ಅದೇ ರೀತಿ, ಕನ್ನಡದ ಕೃತಿಗಳನ್ನು ಇತರ ಭಾಷೆಗಳಿಗೆ ಅನುವಾದಿಸುವುದ–ರಿಂದ ಕನ್ನಡದ ಸಾಹಿತ್ಯಿಕ ಪರಂಪರೆಯನ್ನು ದೇಶ–ವಿದೇಶಗಳ ಓದುಗರಿಗೆ ತಲುಪಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಪುಸ್ತಕ ಬಹುಮಾನ ಪುರಸ್ಕೃತ ಡಾ.ಕೆ. ಶ್ರೀನಾಥ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿ, ಸ್ವಂತ ಕೃತಿ ರಚಿಸುವುದಕ್ಕಿಂತಲೂ ಮತ್ತೊಂದು ಭಾಷೆಯ ಕೃತಿಯನ್ನು ಅದರ ಮೂಲ ಆಶಯಕ್ಕೆ ಧಕ್ಕೆಯಾಗದಂತೆ ಅನುವಾದಿಸುವುದು ಹೆಚ್ಚು ಕಠಿಣ ಕಾರ್ಯವಾಗಿದೆ ಎಂದು ಹೇಳಿದರು.

ಪುಸ್ತಕ ಬಹುಮಾನ ಪುರಸ್ಕೃತೆ ಡಾ.ಮಲರ್ ವಿಳಿ ಕೆ. ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯರುಗಳಾದ ಪ್ರೊ. ಷಾಕಿರಾ ಖಾನಂ, ಡಾ. ಭಾರತಿದೇವಿ ಪಿ., ಡಾ. ಜೆ. ಕರಿಯಪ್ಪ ಮಾಳಿಗೆ ಹಾಗೂ ಪ್ರೊ. ಜಾಜಿ ದೇವೇಂದ್ರಪ್ಪ ಸೇರಿದಂತೆ ವಿವಿಧ ಶಾಲಾ–ಕಾಲೇಜುಗಳ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 2026ನೇ ಸಾಲಿನ ಗೌರವ ಪ್ರಶಸ್ತಿಗೆ ಹಾಗೂ 2025ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಆಯ್ಕೆಯಾದ ಸಾಧಕರನ್ನು ಸನ್ಮಾನಿಸಿ, ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನಗಳನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಅವರು, ಮರಾಠಿಯ ಮೊದಲ ನಾಟಕ ಹುಟ್ಟಿಕೊಳ್ಳಲಿಕ್ಕೆ ಕನ್ನಡದ ಯಕ್ಷಗಾನ ಕಾರಣವಾಗಿದೆ ಎಂದರು. ಮರಾಠಿ ಸಂಗೀತ ನಾಟಕಗಳ ಹುಟ್ಟಿಗೆ ಶ್ರೀಕೃಷ್ಣ ಪಾರಿಜಾತ ಕಾರಣವಾಗಿದೆ. ಶ್ರೀಕೃಷ್ಣ ಪಾರಿಜಾತ ಹುಟ್ಟಿಗೆ ತೆಲುಗಿನ ನಾಟಕಗಳು ಕಾರಣವಾಗಿದೆ ಎಂದು ವಿಶ್ಲೇಷಿಸಿದರು.

ಗೌರವ ಪ್ರಶಸ್ತಿ ಪುರಸ್ಕೃತರಾದ ಡಾ. ಬಂಜಗೆರೆ ಜಯಪ್ರಕಾಶ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿ, ಸಾಹಿತ್ಯ ಕ್ಷೇತ್ರದಲ್ಲಿ ನೈಜ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುವುದು ಮಹತ್ವದ ಕಾರ್ಯವಾಗಿದೆ ಎಂದರು. ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಅನುವಾದ ಕಾರ್ಯ ಅತ್ಯಂತ ಅಗತ್ಯವಾಗಿದೆ. ಇತರ ಭಾಷೆಗಳಲ್ಲಿರುವ ಉತ್ತಮ ಸಾಹಿತ್ಯವನ್ನು ಕನ್ನಡಕ್ಕೆ ತರುವುದರಿಂದ ಕನ್ನಡ ಓದುಗರಿಗೆ ವಿವಿಧ ಭಾಷೆಗಳ ಸಾಹಿತ್ಯದ ಪರಿಚಯವಾಗುತ್ತದೆ. ಅದೇ ರೀತಿ, ಕನ್ನಡದ ಕೃತಿಗಳನ್ನು ಇತರ ಭಾಷೆಗಳಿಗೆ ಅನುವಾದಿಸುವುದರಿಂದ ಕನ್ನಡದ ಸಾಹಿತ್ಯಿಕ ಪರಂಪರೆಯನ್ನು ದೇಶ–ವಿದೇಶಗಳ ಓದುಗರಿಗೆ ತಲುಪಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಕನ್ನಡ ನಾಡಿನ ಭಾಷಾ ವೈವಿಧ್ಯ, ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ಸಾಹಿತ್ಯಿಕ ಪರಂಪರೆಯನ್ನು ಜಗತ್ತಿಗೆ ಪರಿಚಯಿಸುವಲ್ಲಿ ಅನುವಾದ ಮಹತ್ವದ ಪಾತ್ರ ವಹಿಸುತ್ತದೆ. ಕಾಲ ಬದಲಾದಂತೆ ತಂತ್ರಜ್ಞಾನವೂ ಬೆಳೆಯುತ್ತಿದ್ದು, ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಹೊಸ ತಂತ್ರಜ್ಞಾನಗಳ ಬಳಕೆ ಹೆಚ್ಚಾಗುತ್ತಿದೆ. ಆದರೂ ಭಾಷೆಯ ಸೂಕ್ಷ್ಮತೆ, ಸಾಹಿತ್ಯದ ಭಾವನೆ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಸಮರ್ಪಕವಾಗಿ ಗ್ರಹಿಸಿ ಅನುವಾದಿಸುವ ಕಾರ್ಯಕ್ಕೆ ವಿಶೇಷ ಮಹತ್ವವಿದೆ ಎಂದರು.

ಟೇಲ್‌ಎಂಡ್‌ವರೆಗೆ ಸಮಾನವಾಗಿ ನೀರು ತಲುಪಿಸಲು ವಿವಿಧ ಇಲಾಖೆಗಳ ಜಂಟಿ ಕ್ರಮ

# ಕೆನಾಲ್ ಕೊನೆವರೆಗೆ ನೀರು ಹರಿಸಲು ಪೊಲೀಸರ ಕಾರ್ಯಾಚರಣೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಕೆನಾಲ್‌ನ ಕೊನೆಯ ಭಾಗವಾದ 172ನೇ ವಿತರಣಾ ಪ್ರದೇಶದವರೆಗೆ ನೀರು ತಲುಪುತ್ತಿಲ್ಲ ಎಂದು ರೈತರು ಹಲವು ಬಾರಿ ಹೋರಾಟ ನಡೆಸಿದ ಹಿನ್ನೆಲೆಯಲ್ಲಿ, ರೈತರ ಹಿತದೃಷ್ಟಿಯಿಂದ ಝಳಕಿ ಠಾಣಾಧಿಕಾರಿ ಮಂಜುನಾಥ ತೀರಕನ್ನವರ ನೇತೃತ್ವದಲ್ಲಿ ಚುರುಕಿನ ಕಾರ್ಯಾಚರಣೆ ನಡೆಸಲಾಯಿತು.

ಏಳಗಿ ಕೆನಾಲ್‌ನಿಂದ ಹತ್ತಳ್ಳಿ ಗ್ರಾಮದ 172ನೇ ಟೇಲ್‌ಎಂಡ್‌ವರೆಗೆ ನೀರು ಹ–ರಿಯುತ್ತಿಲ್ಲ. ಇದರಿಂದ ಕೊನೆಯ ಭಾಗದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ರೈತರು ಕೆ.ಬಿ.ಜೆ.ಎನ್.ಎಲ್. ಕಚೇರಿ ಎದುರು ಹಲವು ಬಾರಿ ಪ್ರತಿಭಟನೆ ನಡೆಸಿದ್ದರು. ಈ ಸಮಸ್ಯೆಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಕೆನಾಲ್‌ನುದ್ದಕ್ಕೂ ಪರಿಶೀಲನೆ ನಡೆಸಿ, ಅನಗತ್ಯವಾಗಿ ನೀರು ಬಳಕೆ ಮಾಡುತ್ತಿದ್ದ ಮೋಟರ್‌ಗಳನ್ನು ಸ್ಥಗಿತಗೊಳಿಸುವ ಕ್ರಮ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಝಳಕಿ ಠಾಣಾಧಿಕಾರಿ ಮಂಜುನಾಥ ತೀರಕನ್ನವರ, "ಕೆನಾಲ್‌ನ ಕೊನೆಯ ಭಾಗದ ರೈತರಿಗೂ ಸಮರ್ಪಕವಾಗಿ ನೀರು ತಲುಪಬೇಕು ಎಂಬುದು ನಮ್ಮ ಉದ್ದೇಶ. ಏಳಗಿ ಕೆನಾಲ್‌ನಿಂದ 172ನೇ ಟೇಲ್‌ಎಂಡ್‌ವರೆಗೆ ಪರಿಶೀಲನೆ ನಡೆಸಿ, ಅನಗತ್ಯವಾಗಿ ನೀರು ಬಳಸುತ್ತಿದ್ದ ಮೋಟ–ರ್‌ಗಳನ್ನು ಬಂದ್ ಮಾಡಿಸಲಾಗಿದೆ. ಎಲ್ಲ ರೈತರಿಗೂ ಸಮಾನವಾಗಿ ನೀರು ಸಿಗಬೇಕು, ಎಲ್ಲರೂ ನೆಮ್ಮದಿಯಿಂದ ಇರಬೇಕು ಎಂಬ ರೈತರ ಹಿತದೃಷ್ಟಿಯಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಇದನ್ನು ಯಾರೂ ಅನ್ಯಥಾ ಭಾವಿಸಬಾರದು" ಎಂದು ತಿಳಿಸಿದರು. ರೈತರು, ಜಾನುವಾರುಗಳು ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ನೀರು ವ್ಯರ್ಥವಾಗದಂತೆ ಸಮರ್ಪಕವಾಗಿ ಬಳಕೆ ಮಾಡುವ ಕುರಿತು ಅಧಿಕಾರಿಗಳು ಸೂಚನೆ ನೀಡಿದರು. ಚಡಚಣ ತಾಲೂಕು ತಹಶೀಲ್ದಾರ್ ಸಂಜಯ ಇಂಗಳೆ, ಕೆ.ಬಿ.ಜೆ. ಎನ್.ಎಲ್. ಇಲಾಖೆ, ಕಂದಾಯ ಇಲಾಖೆ, ಝಳಕಿ ಪೊಲೀಸ್ ಇಲಾಖೆ ಹಾಗೂ ವಿದ್ಯುತ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ರೈತರ ಸಹಕಾರದೊಂದಿಗೆ ಈ ಜಂಟಿ ಕಾರ್ಯಾಚರಣೆ ನಡೆಸಿದರು.

ಈ ಸಂದರ್ಭದಲ್ಲಿ ಕೆ.ಬಿ.ಜೆ.ಎನ್.ಎಲ್. ಇಲಾಖೆಯ ಅಧಿಕಾರಿ ಅಂಗಡಿ, ಶ್ರೀಮಂತ ಚಂದ್ರಕಾಂತ ಕೋಳಿ, ವಿದ್ಯುತ್ ಇಲಾಖೆಯ ಅಧಿಕಾರಿ ವಿಜಯಕುಮಾರ ಹವಾಲ್ದಾರ್, ಏಳಗಿ ಗ್ರಾಮದ ರೈತರಾದ ಪ್ರವೀಣ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ರೈತರು ಉಪಸ್ಥಿತರಿದ್ದರು.

# ಇತಿಹಾಸ ಪುರುಷ ರಾವಬಹದ್ದೂರ್ ಅರಟಾಳ ರುದ್ರಗೌಡ




■ ದಯರಶ್ಮಿ ದಿನಪತ್ರಿಕೆ

ತಮ್ಮ ಬದುಕನ್ನು ಸಮಾಜ ಸೇವೆಗೆ ಮೀಸಲಿಟ್ಟು ಕೊನೆ ಉಸಿರು ಇರುವವರೆಗೆ ಲಿಂಗಾಯತ ಸಮಾಜದ ಅಭಿವೃದ್ಧಿಗೆ ಭದ್ರ ಬುನಾದಿ ನೀಡಿದ ದಿಟ್ಟ ಧೀಮಂತ ನಾಯಕ ಶ್ರೀ ಅರಟಾಳ ರುದ್ರಗೌಡರು.

ರಾವ್ ಬಹದ್ದೂರ್ ರುದ್ರಗೌಡ ಚನ್ನವೀರಗೌಡ ಅರಟಾಳ (ಅರಟಾಳ ರುದ್ರಗೌಡರು) ಅವರು ಬ್ರಿಟಿಷ್ ಭಾರತದ ಆಡಳಿತಾವಧಿಯಲ್ಲಿ ಉತ್ತರ ಕರ್ನಾಟಕ ಭಾಗದ ಅತ್ಯಂತ ಪ್ರಮುಖ ಆಡಳಿತಗಾರರು, ದಕ್ಷ ಅಧಿಕಾರಿ ಹಾಗೂ ಪ್ರಭಾವಿ ಸಾಮಾಜಿಕ ಮತ್ತು ಶೈಕ್ಷಣಿಕ ಹೋರಾಟಗಾರರಾಗಿದ್ದರು.

ಇವರು ಬ್ರಿಟಿಷ್ ಸರ್ಕಾರದಲ್ಲಿ ಡೆಪ್ಯುಟಿ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿ, ಭ್ರಷ್ಟಾಚಾರ ನಿರ್ಮೂಲನೆಗೆ ಹೆಸರಾಗಿದ್ದರು.

ಅರಟಾಳ ರುದ್ರಗೌಡರ ಜೀವನ ಮತ್ತು ಸಮಾಜಕ್ಕೆ ಅವರು ನೀಡಿದ ಪ್ರಮುಖ ಕೊಡುಗೆಗಳ ವಿವರ ಇಲ್ಲಿದೆ:

**1. ಜನನ ಮತ್ತು ವೃತ್ತಿ ಜೀವನ**

ಜನನ: ಇವರು ಮಾರ್ಚ್ 22, 1851 ರಂದು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಅರಟಾಳ ಗ್ರಾಮದಲ್ಲಿ (ಅಥವಾ ಕುಂದಗೋಳ ತಾಲೂಕಿನ ಹಿರೆ ಹರಕುಣಿ) ಜನಿಸಿದರು.

ಶಿಕ್ಷಣ: ಕೇವಲ ಮೆಟ್ರಿಕ್ಯುಲೇಶನ್ ವರೆಗೆ ಮಾತ್ರ ಓದಿದ್ದ ಇವರು, ತಮ್ಮ ಅಪಾರ ಬುದ್ಧಿವಂತಿಕೆಯಿಂದ ಉನ್ನತ ಹುದ್ದೆಗೇರಿದರು.

*** ಆಡಳಿತ ಸೇವೆ:**

ಧಾರವಾಡದ ಕಲೆಕ್ಟರ್ ಕಚೇರಿಯಲ್ಲಿ ಸಾಮಾನ್ಯ ಕಾರಕೂನರಾಗಿ (ಕ್ಲರ್ಕ್) ವೃತ್ತಿ ಆರಂಭಿಸಿದ ಇವರು, ತಮ್ಮ ಪ್ರಾಮಾಣಿಕತೆಯಿಂದಾಗಿ ಡೆಪ್ಯುಟಿ ಜಿಲ್ಲಾ ಕಲೆಕ್ಟರ್ (ಆಜಠಿಣಥಿ ಅಠಟಟಜಛಿ–ಣಠಡಿ) ಹುದ್ದೆಯವರೆಗೆ ಬೆಳೆದರು.

ಭ್ರಷ್ಟಾಚಾರ ಮುಕ್ತ ಆಡಳಿತ: ಅಂದಿನ ಬ್ರಿಟಿಷ್ ಸರ್ಕಾರದ ರೆವಿನ್ಯೂ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ನಲ್ಲಿ, "ಕಂದಾಯ ಇಲಾಖೆಯಿಂದ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿದ ಕೀರ್ತಿ ರಾವ್ ಬಹದ್ದೂರ್ ಆರ್.ಸಿ. ಅರಟಾಳ್ ಅವರಿಗೆ ಸಲ್ಲುತ್ತದೆ" ಎಂದು ವಿಶೇಷವಾಗಿ ಬ್ರಿಟಿಷರೇ ದಾಖಲಿಸಿದ್ದಾರೆ.




2. ಶೈಕ್ಷಣಿಕ ಕೊಡುಗೆಗಳು (ಕರ್ನಾಟಕ ಕಾಲೇಜು ಸ್ಥಾಪನೆ)

1910ರ ದಶಕದವರೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಉನ್ನತ ಶಿಕ್ಷಣಕ್ಕಾಗಿ ಒಂದೂ ಕಾಲೇಜು ಇರಲಿಲ್ಲ. ಇವರು ಈ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸಿದರು

* ಧಾರವಾಡದಲ್ಲಿ ಕರ್ನಾಟಕ ಕಾಲೇಜು (ಏಅಆ) ಸ್ಥಾಪಿಸುವಲ್ಲಿ ಇವರು ಅತ್ಯಂತ ಪ್ರಮುಖ ಪಾತ್ರ ವಹಿಸಿದರು.

* ಕಾಲೇಜು ಆರಂಭಿಸಲು ಬ್ರಿಟಿಷ್ ಸರ್ಕಾರ 2 ಲಕ್ಷ ರೂಪಾಯಿಗಳ ಠೇವಣಿ ಕೇಳಿದಾಗ, ಇವರು ಲಿಂಗಾಯತ ಸಮಾಜದ ಮುಖಂಡರನ್ನು ಒಗ್ಗೂಡಿಸಿ ಅತ್ಯಂತ ಕಡಿಮೆ ಅವಧಿಯಲ್ಲಿ 2 ಲಕ್ಷ ರೂಪಾಯಿಗಳ ನಿಧಿಯನ್ನು ಸಂಗ್ರಹಿಸಿಕೊಟ್ಟರು.

* ಪ್ರಸಿದ್ಧ ಶೈಕ್ಷಣಿಕ ಸಂಸ್ಥೆಯಾದ ಕೆ.ಎಲ್.ಇ (ಏಐಇ) ಸಂಸ್ಥೆಯ ಸ್ಥಾಪನೆಗೆ ಹಿರಿಯರನ್ನು ದಾನ ಮಾಡಲು ಪ್ರೇರೇಪಿಸಿದವರಲ್ಲಿ ಇವರೂ ಪ್ರಮುಖರಾಗಿದ್ದರು.

**3. ಸಾಮಾಜಿಕ ನಾಯಕತ್ವ ಮತ್ತು ಬಿರುದುಗಳು**

ವೀರಶೈವ ಮಹಾಸಭೆ: ಅಖಿಲ ಭಾರತ ವೀರಶೈವ ಮಹಾಸಭೆಯ ಆರಂಭಿಕ ದಿನಗಳಲ್ಲಿ ಅದರ ಸಕ್ರಿಯ ಮುಖಂಡರಾಗಿ ಮತ್ತು ಅಧ್ಯಕ್ಷರಾಗಿ ಸಮಾಜದ ಸುಧಾರಣೆಗೆ ಶ್ರಮಿಸಿದರು ಅಲ್ಲದೆ 1912 ರಲ್ಲಿ ನಿಪ್ಪಾಣಿಯಲ್ಲಿ ಜರುಗಿದ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಐತಿಹಾಸಿಕ ಭಾಷಣ ಮಾಡಿದರು.

**ಗೌರವಗಳು**

ಇವರ ಪ್ರಾಮಾಣಿಕ ಆಡಳಿತ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ಇವರಿಗೆ 'ರಾವ್ ಬಹದ್ದೂರ್' ಮತ್ತು 'ಸರ್' ಬಿರುದುಗಳನ್ನು ನೀಡಿ ಗೌರವಿಸಿತ್ತು.

ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರಿಗಿಂತಲೂ ವಯಸ್ಸಿನಲ್ಲಿ ಹಿರಿಯರಾಗಿದ್ದ ಅರಟಾಳ ರುದ್ರಗೌಡರು, ಉತ್ತರ ಕರ್ನಾಟಕದಲ್ಲಿ ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಮತ್ತು ಶಿಕ್ಷಣದ ಕ್ರಾಂತಿಗೆ ಮುನ್ನುಡಿ ಬರೆದ ಧೀಮಂತ ನಾಯಕರಾಗಿದ್ದಾರೆ. ಇವರು ಅಕ್ಟೋಬರ್ 4, 1932 ರಂದು ನಿಧನರಾದರು. ಕರ್ನಾಟಕ ಚರಿತ್ರೆಯಲ್ಲಿ ಲಿಂಗಾಯತರ ಇತಿಹಾಸದಲ್ಲಿ ಶಾಶ್ವತವಾಗಿ ನೆಲೆ ನಿಂತ ಉಕ್ಕಿನ ಮನುಷ್ಯ.

ರಾವ್ ಬಹದ್ದೂರ್ ಅರಟಾಳ ರುದ್ರಗೌಡರ ಜೀವನದ ಮಹತ್ವದ ಘಟನೆಗಳು, ಕರ್ನಾಟಕ ಕಾಲೇಜಿನ ಸ್ಥಾಪನೆಯ ರೋಚಕ ಇತಿಹಾಸ ಮತ್ತು ಅವರ ಸಾಮಾಜಿಕ ಹೋರಾಟಗಳ ಆಳವಾದ ವಿವರಗಳು ಇಲ್ಲಿವೆ.

**ಕರ್ನಾಟಕ ಕಾಲೇಜು (ಏಅಆ) ಸ್ಥಾಪನೆಯ ಇತಿಹಾಸ**

1917 ಕ್ಕಿಂತ ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಉನ್ನತ ಶಿಕ್ಷಣಕ್ಕಾಗಿ ಯಾವುದೇ ಕಾಲೇಜು ಇರಲಿಲ್ಲ. ಇಲ್ಲಿನ ವಿದ್ಯಾರ್ಥಿಗಳು ಪದವಿ ಶಿಕ್ಷಣಕ್ಕಾಗಿ ಪುಣೆ (ಪುಣಾ) ಅಥವಾ ಮುಂಬೈಗೆ (ಬಾಂಬೆ) ಹೋಗಬೇಕಾಗಿತ್ತು. ಇದನ್ನು ತಪ್ಪಿಸಲು ಅರಟಾಳ ರುದ್ರಗೌಡರು

* ಬ್ರಿಟಿಷರ ಕಠಿಣ ಷರತ್ತು: ಧಾರವಾಡದಲ್ಲಿ ಕಾಲೇಜು ಸ್ಥಾಪಿಸಲು ಬ್ರಿಟಿಷ್ ಸರ್ಕಾರ ಸಾರ್ವಜನಿಕರಿಂದ ಭಾರಿ ಮೊತ್ತದ ಧನಸಹಾಯವನ್ನು ಠೇವಣಿಯಾಗಿ ಕೇಳಿತು.

ನಿಧಿ ಸಂಗ್ರಹದ ಸವಾಲು: ಅರಟಾಳ ರುದ್ರಗೌಡರು ಉತ್ತರ ಕರ್ನಾಟಕದ ಮೂಲೆ ಮೂಲೆಗಳಿಗೆ ಸಂಚರಿಸಿ, ಪ್ರಮುಖ ದಾನಿಗಳನ್ನು, ಜಮೀನ್ದಾರರನ್ನು ಮತ್ತು ಸಾಮಾನ್ಯ ಜನರನ್ನು ಭೇಟಿಯಾಗಿ ಕೇವಲ ಎರಡು ಲಕ್ಷ ರೂಪಾಯಿಗಳನ್ನು (ಆ ಕಾಲದ ಬೃಹತ್ ಮೊತ್ತ) ಒಟ್ಟುಗೂಡಿಸಿದರು.

ಸ್ಥಾಪನೆ: ಈ ಜಂಟಿ ಪ್ರಯತ್ನದಿಂದಾಗಿ ಜೂನ್ 29, 1917 ರಂದು ಬಾಂಬೆ ಪ್ರೆಸಿಡೆನ್ಸಿಯ ಗವರ್ನರ್ ಅವರಿಂದ ಕಾಲೇಜಿನ ಶಂಕುಸ್ಥಾಪನೆ ನೆರವೇರಿತು.






ಸರ ಸಿದ್ದಪ್ಪ ಕಂಬಳಿ: ನಂತರದ ದಿನಗಳಲ್ಲಿ ಕಾಲೇಜು ಮುಚ್ಚುವ ಪರಿಸ್ಥಿತಿಗೆ ಬಂದಾಗ ಮತ್ತು ವಿಜ್ಞಾನ ವಿಭಾಗವನ್ನು ಆರಂಭಿಸಬೇಕಾದಾಗ, ಬಾಂಬೆ ಸರ್ಕಾರದ ಶಿಕ್ಷಣ ಮಂತ್ರಿಯಾಗಿದ್ದ ಸರ ಸಿದ್ದಪ್ಪ ಕಂಬಳಿ ಅವರು ತಮ್ಮ ರಾಜಕೀಯ ಪ್ರಭಾವ ಬಳಸಿ ಈ ಕಾಲೇಜನ್ನು ಉಳಿಸಿ, ಬೆಳೆಸಿದರು. ಇದೇ ಕಾಲೇಜು ಇಂದು ವಿಶ್ವಪ್ರಸಿದ್ಧ ಕರ್ನಾಟಕ ಕಲೆ ಮತ್ತು ವಿಜ್ಞಾನ ಕಾಲೇಜು (ಏಅಆ) ಎಂದು ಹೆಸರುವಾಸಿಯಾಗಿದೆ.

ಸಾಮಾಜಿಕ ಹೋರಾಟಗಳು ಮತ್ತು ಆರ್ಥಿಕ ಕ್ರಾಂತಿ

ರುದ್ರಗೌಡರ ಹೋರಾಟ ಕೇವಲ ಶಿಕ್ಷಣಕ್ಕೆ ಸೀಮಿತವಾಗಿರಲಿಲ್ಲ, ಅವರು ಉತ್ತರ ಕರ್ನಾಟಕದ ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬನೆಗೂ ಬುನಾದಿ ಹಾಕಿದರು:

ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ (ಏಅಅ ಃಚಿಟಿಞ) ಸ್ಥಾಪನೆ

ರೈತರು ಮತ್ತು ಸಾರ್ವಜನಿಕರು ಲೇವಾದೇವಿದಾರರ (ಸಾಹುಕಾರರ) ಸಾಲದ ಸುಳಿಗೆ ಸಿಲುಕಿ ಶೋಷಣೆಗೆ ಒಳಗಾಗುವುದನ್ನು ತಡೆಯಲು ಅರಟಾಳ ರುದ್ರಗೌಡರು 1916 ರಲ್ಲಿ ದಿವಾನ ಬಹದ್ದೂರ್ ಮೆಣಸಿನಕಾಯಿ ಹಾಗೂ ಇತರ ಮುಖಂಡರೊಂದಿಗೆ ಸೇರಿ ಧಾರವಾಡದಲ್ಲಿ ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ಸ್ಥಾಪನೆಗೆ ಪ್ರೇರಕ ಶಕ್ತಿಯಾದರು.

ಬೃಹತ್ ಮೊತ್ತದ ನಿಧಿ ಸಂಗ್ರಹ

ತಮ್ಮ ಜೀವಿತಾವಧಿಯ ಹೋರಾಟದಲ್ಲಿ (1883–1917) ಅವರು ಸಾರ್ವಜನಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕೆಲಸಗಳಿಗಾಗಿ ಅಂದಾಜು 25 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದರು. ಇಂದಿನ ಮೌಲ್ಯದಲ್ಲಿ ಇದು ನೂರಾರು ಕೋಟಿ ರೂಪಾಯಿಗಳಿಗೆ ಸಮನಾಗುತ್ತದೆ.




ನಿರ್ದಿಷ್ಟ ಐತಿಹಾಸಿಕ ಘಟನೆಗಳು

ಭ್ರಷ್ಟಾಚಾರದ ವಿರುದ್ಧ ರಾಜಿ ಇಲ್ಲದ ಆಡಳಿತ: ಅರಟಾಳ ರುದ್ರಗೌಡರು ಬೆಳಗಾವಿಯ ಡೆಪ್ಯುಟಿ ಕಲೆಕ್ಟರ್ ಆಗಿದ್ದಾಗ ಕಂದಾಯ ಇಲಾಖೆಯಲ್ಲಿದ್ದ ಲಂಚಗುಳಿತನ ಮತ್ತು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿದರು. ಬ್ರಿಟಿಷ್ ಸರ್ಕಾರದ ಅಧಿಕೃತ ಆಡಳಿತ ವರದಿಯಲ್ಲೇ (ಖಜತಜಟಿಣಜ ಂಜಟುಟಿ–ಽಣಡಿಚಿಣುತಜ ಖಜಠಿಠಡಿಣ), "ಕಂದಾಯ ಇಲಾಖೆಯಿಂದ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಡೆದುಹಾಕಿದ ಕೀರ್ತಿ ರಾವ್ ಬಹದ್ದೂರ್ ಆರ್. ಸಿ. ಅರಟಾಳ ಅವರಿಗೆ ಸಲ್ಲುತ್ತದೆ" ಎಂದು ಮುಕ್ತವಾಗಿ ಪ್ರಶಂಸಿಸಲಾಗಿದೆ.

ಇವರು ಸ್ಥಾಪಿಸಿದ ಲಿಂಗಾಯತ ಶಿಕ್ಷಣ ಸಂಸ್ಥೆ ಐಇಂ ಮೂಲಕ ಡಾ ಫ ಗು ಹಳಕಟ್ಟಿ ಪ್ರೊ ಶಿ ಶಿ ಬಸವನಾಳ ಪ್ರೊ ಎಂ ಆರ್ ಸಾಖರೆ ಮುಂತಾದ ಎಲ್ಲಾ ಮಹನೀಯರು ಶಿಕ್ಷಣ ಪಡೆದು ಲಿಂಗಾಯತ ಸಮುದಾಯದಲ್ಲಿ ಶ್ರೇಷ್ಠ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿದರು.

ಇಂತಹ ಗೌರವ ಪಡೆದ ಮೊದಲ ಭಾರತೀಯ ಅಧಿಕಾರಿ ಇವರಾಗಿದ್ದಾರೆ.

**ಕೆ.ಎಲ್.ಇ (ಏಐಇ) ಸಂಸ್ಥೆಯ ಪ್ರಥಮ ಅಧ್ಯಕ್ಷರು**

ಬೆಳಗಾವಿಯ "ಸಪ್ತರ್ಷಿಗಳು" (ಏಳು ಜನ ಶಿಕ್ಷಕರು) ಸೇರಿ 1916 ರಲ್ಲಿ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ (ಏಐಇ ಖಠ–ಛಿಜಣಥಿ) ಯನ್ನು ಸ್ಥಾಪಿಸಿದಾಗ, ಅದರ ನೇತೃತ್ವ ವಹಿಸಲು ಅವರಿಗೆ ಒಬ್ಬ ಸಮರ್ಥ ಹಿರಿಯ ಮಾರ್ಗದರ್ಶಕರ ಅಗತ್ಯವಿತ್ತು. ಆಗ ಅರಟಾಳ ರುದ್ರಗೌಡರು ಅದರ ಜವಾಬ್ದಾರಿ ಹೊತ್ತುಕೊಂಡು, ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ (1916 ರಿಂದ 1928 ರವರೆಗೆ) ಸೇವೆ ಸಲ್ಲಿಸಿದರು. ಇವರ ಗೌರವಾರ್ಥವಾಗಿ ಕೆ.ಎಲ್.ಇ ಸಂಸ್ಥೆಯ ಮೊದಲ ಶಾಲೆಯನ್ನು ಇವರ ಮತ್ತು ಗಿಲಗಂಚಿ ಗುರುಸಿದ್ದಪ್ಪನವರ ಹೆಸರಿನಲ್ಲೇ ಸ್ಥಾಪಿಸಲಾಯಿತು.

ಖ್ಯಾತ ಸಂಶೋಧಕ ಡಾ. ಎಂ. ಎಂ. ಕಲಬುರ್ಗಿಯವರು ಅರಟಾಳ ರುದ್ರಗೌಡರ ಚರಿತ್ರೆಯನ್ನು ಕೇವಲ ಒಬ್ಬ ವ್ಯಕ್ತಿಯ ಚ–ರಿತ್ರೆಯಲ್ಲ, ಬದಲಿಗೆ ಅದು "ಅರ್ಧ ಶತಮಾನದ ಉತ್ತರ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ" ಎಂದು ಬಣ್ಣಿಸಿದ್ದಾರೆ. ಇಂತಹ ಅಪರೂಪದ ಪ್ರಾಮಾಣಿಕ ಪಾರದರ್ಶಕ ಸರಳ ಸಜ್ಜನಿಕೆಯ ಶರಣ ರಾವ್ ಬಹಾದ್ದೂರ ಶ್ರೀ ಅರಟಾಳ ರುದ್ರಗೌಡರು ಲಿಂಗಾಯತ ಸಮಾಜದ ಧ್ರುವ ತಾರೆ



## ಬೌದ್ಧ ವಿಧಿ ಸಂಸ್ಕಾರ ಮತ್ತು ಮಾರ್ಗದರ್ಶಕ ಪುಸ್ತಕ ಲೋಕಾರ್ಪಣೆ

ಕಲಬುರಗಿ: ನಗರ ಹೊರವಲಯದ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರು ಬೌದ್ಧಧಮ್ಮ ಸ್ವೀಕರಿಸಿದ 70ನೇ ಧಮ್ಮಚಕ್ರ ಪ್ರವರ್ತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಹೇಂದ್ರ ಫೌಂಡೇಶನ್ ವತಿಯಿಂದ ಪ್ರಕಾಶನಗೊಂಡ ವಿಜಯ ಕಾಂಬಳೆ ಬರೆದ ಬೌದ್ಧ ವಿಧಿ ಸಂಸ್ಕಾರ ಮತ್ತು ಮಾರ್ಗದರ್ಶಕ ಎಂಬ ಮರಾಠಿ ಭಾಷೆಯ ಪುಸ್ತಕವನ್ನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಲೋಕಾರ್ಪಣೆ ಮಾಡಿದರು.ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರುಗಳಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ ಗುತ್ತೇದಾರ್, ವಸಂತ್ ಕುಮಾರ್, ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಕುಮಾರ್ ಪಾಟೀಲ್ ಹರವಾಳ, ಕೆಪಿಸಿಸಿ ಕಲಬುರಗಿ ಜಿಲ್ಲಾಧ್ಯಕ್ಷರಾದ ಡಾ. ಕಿರಣ್ ದೇಶಮುಖ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಅರವಿಂದ ಅರಳಿ, ಶಾಂತಪ್ಪ ಸೂರನ್, ಸಾಹಿತಿ ಡಾ.ನಟರಾಜ್ ಹುಳಿಯಾರ್,ಡಾ. ಚಂದ್ರಶೇಖರ್ ದೊಡ್ಡಮನಿ, ಅನಿಲಕುಮಾರ ಸುಗಂಧಿ ಮತ್ತು ಮಿಲಿಂದ್ ಗುರೂಜಿ ಮುಂತಾದವರು ಉಪಸ್ಥಿತರಿದ್ದರು

## ನನಗೂ ಗಜಲ್ ಬರೆಯಬೇಕೆಂಬ ಆಸೆ: ಎ.ಕೆ.ರಾಮೇಶ್ವರ

ಚಿತ್ತಾಪುರ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಚಿತ್ತಾಪುರ ಹಾಗೂ ಸುವನಾ ಪ್ರಕಾಶನ ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಚಿತ್ತಾಪೂರಿನ ವರುಣ ನಗರದ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ರವಿವಾರ ರಂದು ನಡೆದ ಉಮೇಶ್ ಬಾಬು ಎಂ ಸಾಸಾಬಾಳ್ ವಿರಚಿತ ಮೌನಡಂಗುರ ಕವನ ಸಂಕಲನ, ಭಾವ ಬಂಧುರ ಮತ್ತು ಭಾವಭ್ರಂಗ ಗಜಲ್ ಸಂಕಲನ ಕಾವ್ಯ ಕೃತಿಗಳ ಲೋಕಾರ್ಪಣಾ ಸಮಾರಂಭದಲ್ಲಿ 96ರ ಹರೆಯದ ಹಿರಿಯ ಮಕ್ಕಳ ಸಾಹಿತಿ ಏ. ಕೆ. ರಾಮೇಶ್ವರ ರವರು ಕೃತಿ ಬಿಡುಗಡೆ ಮಾಡಿ ಮಾತನಾಡುತ್ತಾ ಸಾಹಿತಿ ಉಮೇಶ್ ಬಾಬು ರವರ ಗಜಲ್ ಗಳು ಓದಿದಾಗ ನನಗನ್ನಿಸಿದ್ದು ನಾನು ಮಕ್ಕಳ ಸಾಹಿತಿಯಾಗಿ ಇಷ್ಟು ವರ್ಷ ಬರವಣಿಗೆ ಮಾಡಿದರು ಕೂಡ ಗಜಲ್ ಬರೆಯಬೇಕೆಂಬ ಆಸೆಯಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ವಿಜಯಕುಮಾರ್ ಪಾಟೀಲ್ ತೇಗಲತಿಪ್ಪಿ ಯವರು ಮಾತನಾಡುತ್ತಾ ಪ್ರಾಚೀನ ವಿಶ್ವವಿದ್ಯಾಲಯವಿರುವ ನಾಗಾವಿ ಘಟಿಕ ಸ್ಥಾನ ಇದು ಸಾಮಾನ್ಯವಾದ ನೆಲವಲ್ಲ ಇದು ಪ್ರಾಚೀನ ಕಾಲದಲ್ಲಿಯೇ ಸಾಹಿತ್ಯಿಕವಾಗಿ ಉಚ್ಛ್ರಾಯ ಸ್ಥಿತಿಯಲ್ಲಿರುವಂತಹ ಪುಣ್ಯಭೂಮಿ, ಹಾಗೆಯೇ ಹಲವಾರು ದಶಕಗಳಿಂದ ಸಾಹಿತ್ಯ ಪರಿಷತ್ತಿನ ಅನೇಕ ಚಟುವಟಿಕೆಗಳು ಇಲ್ಲಿ ನಡೆದಿವೆ ಎಂದು ನುಡಿಯುತ್ತಾ ಉಮೇಶ್ ಬಾಬುರವರು ರಚಿಸಿರುವ ಈ ಕೃತಿಗಳು ಬಹಳ ಪ್ರೌಢ ಮಟ್ಟದ ಕವನ ಹಾಗೂ ಗಜಲ್ ಗಳಾಗಿವೆ ಎಂದು ನುಡಿದರು.

ಮೌನದಂಗೂರ ಮೌನ ಡಂಗುರ ಕೃತಿ ಪರಿಚಯ ಮಾಡಿದ ಹಿರಿಯ ಸಾಹಿತಿಗಳಾದ ಲಿಂಗಾರೆಡ್ಡಿ ಸೇರಿ ಸೇಡಂ ರವರು ಮಾತನಾಡುತ್ತಾ ಈ ಕೃತಿಯ ಹೆಸರಾದ ಮೌನ ಡಂಗುರದ ಹೆಸ–ರಿನ ಅರ್ಥಪೂರ್ಣತೆಯನ್ನು ವಿವರಿಸುತ್ತಾ ಕೃತಿಯಲ್ಲಿ ಲೇಖಕರು ತಮ್ಮ ತಂದೆಗೆ ಅರ್ಪಣೆ ಮಾಡಿ ಬರೆದ ಕವನದ ವಿವರಣೆಯನ್ನು ಕೊಡುತ್ತಾ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್ನೆರಡು ಗಜಲ್ ಕೃತಿಗಳ ಪರಿಚಯ ಮಾಡಿಕೊಟ್ಟ ಖ್ಯಾತ ಕವಿ/ ಸಾಹಿತಿ/ ಪತ್ರಕರ್ತ ಮಹಿಪಾಲರೆಡ್ಡಿ ಮುನ್ನೂರು ಮಾತನಾಡುತ್ತಾ ನೋಡಿದರೆ ಸಾಧಾರಣ ವ್ಯಕ್ತಿತ್ವದ ಚಿತ್ರ ಕಲಾವಿದನ ಆಂತರ್ಯದಲ್ಲಿ ಇಂತಹ ಅದ್ಭುತ ರಸಿಕತೆಯ ಕವಿ ಮನಸ್ಸು ಅಡಗಿದೆ ಎಂದು ಊಹಿಸಲೂ ಅಸಾಧ್ಯ ಅಂತಹ ಅತ್ಯುತ್ತಮ ಮಟ್ಟದ ಗಜಲ್ ಗಳನ್ನು ರಚಿಸಿದ್ದಾರೆ ಎಂದು ಒಂದೊಂದು ಗಜಲ್ ಗಳನ್ನು ಬಿಚ್ಚಿಟ್ಟು, ಕೃತಿಗಳನ್ನು ಯಾವಾಗ ಕೊಂಡು ಓದೋಣ ಎನ್ನುವ ಹಂಬಲವನ್ನು ಸಭಿಕರ ಮನದಲ್ಲಿ ಮೂಡುವಂತೆ ಮಾಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ದಿಗ್ಗಾಂವ ಹಂಚಗ್ರಹ ಹಿರೇಮಠದ ಸಿದ್ದವೀರ ಶಿವಾಚಾರ್ಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಶಿಕ್ಷಕ ಸುಧಾಕರ್ ರಾವ್ ಸರಾಫ ಆಗಮಿಸಿದ್ದರು.

ಕೃತಿಗಳ ಲೋಕಾರ್ಪಣೆಯನ್ನು ಖ್ಯಾತ ಚಿತ್ರಕಲಾವಿದ ನಾಡೋಜ ಡಾ.ಜೆ ಎಸ್. ಖಂಡೆರಾವ ಹಾಗೂ ಮಕ್ಕಳ ಸಾಹಿತಿ ಎ.ಕೆ. ರಾಮೇಶ್ವರ್, ಖ್ಯಾತ ನ್ಯಾಯವಾದಿ ಚಂದ್ರಶೇಖರ್ ಅವಂಟಿ ಮಾಡಿದರು.

ಕೃತಿಗಳ ಪರಿಚಯ ಮಾಡಿದಂತಹ ಖ್ಯಾತ ಕವಿ ಸಾಹಿತಿಗಳಾದ ಸೇಡಂನ ಲಿಂಗಾರೆಡ್ಡಿ ಸೇರಿ ಮತ್ತು ಮಹಿಪಾಲ ರೆಡ್ಡಿ ಮುನ್ನೂರ ಕೃತಿಗಳ ಪರಿಚಯ ಮಾಡಿದರು.ಬಿಎಆರ್‌ಸಿ ನಿವೃತ್ತ ಆಡಳಿತಾಧಿಕಾರಿ ರಾಮಕೃಷ್ಣ ಕುಲಕರ್ಣಿ, ಸಾಹಿತಿ ಎ.ಕಮಲಾಕರ್ ಸುರಪುರ ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೇಂದ್ರಬಿಂದುವಾದ ಚಿತ್ರ ಕಲಾವಿದ ಸಾಹಿತಿ ಉಮೇಶ್ ಬಾಬು ಎಮ್ ಸಾಸಾ ಬಾಳ್, ತಮ್ಮ ಅನಿಸಿಕೆ ಹಂಚಿಕೊಂಡರು. ನಿವೃತ್ತ ಶಿಕ್ಷಕ ದೇವಿಂದ್ರಪ್ಪ ಶಾಬಾದಕರ್ ಲೇಖಕರ ಪರಿಚಯ ಮಾಡಿದರು.

ಪ್ರಸ್ತಾವಿಕ ನುಡಿಯನ್ನು ಶಂಕರ ಬಿರಾದಾರ್ ನುಡಿದರು. ಸಂಗಮೇಶ್ವರ ರೋಣದ ಸ್ವಾಗತ ಕೋರಿದರು, ಕಾರ್ಯಕ್ರಮದ ನಿರೂಪಣೆಯನ್ನು ಸಾಧನ ನಟರಾಜ್ ಶಿಲ್ಪಿ ಮಾಡಿದರೆ, ಅಧ್ಯಕ್ಷತೆಯನ್ನು ಚಿತ್ತಾಪುರ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೀರಭದ್ರಪ್ಪ ಗುರುಮಿಟಕಲ್ ವಹಿಸಿದ್ದರು.

## ಡಿಸೆಂಬರಲ್ಲಿ ಕಲಬುರ್ಗಿಯಲ್ಲಿ ಕಲಾವಿದರ ಸಮ್ಮೇಳನ :ಆಲಮೇಲ

■ ಉದಯರಶ್ಮಿ ದಿನಪತ್ರಿಕೆ

ಯಡ್ರಾಮಿ: ಕಲೆ, ಸಾಹಿತ್ಯ, ಸಂಸ್ಕೃತಿ, ಕಲಾವಿದರ ಉಳುವಿಗಾಗಿ – ಬೆಳವಿಗಾಗಿ, ಮುಂಬರುವ ಡಿಸೆಂಬರ ಕೊನೆಯಲ್ಲಿ ಕಲ್ಯಾಣ ಕರ್ನಾಟಕ ಕೇಂದ್ರ ಸ್ಥಾನವಾದ ಕಲ್ಬುರ್ಗಿಯಲ್ಲಿ, ರಾಜ್ಯಾಧ್ಯಕ್ಷರಾದ ಎಂ, ಎಸ್, ರವೀಂದ್ರ ಮತ್ತು ನಮ್ಮಕಲಬುರ್ಗಿ ಜಿಲ್ಲಾ ಕೆಎಫ್ಸಿ ಗೌರವಾಧ್ಯಕ್ಷರಾದ ಶ್ರೀ ಮಹಿಪಾಲರೆಡ್ಡಿ ಮುನ್ನೂರ್ ಅವರ ನೇತೃತ್ವದಲ್ಲಿ ಕನ್ನಡ ಫಿಲಂ ಚೇಂಬರ್ ಜಿಲ್ಲಾ ಘಟಕದ ವತಿಯಿಂದ ರಂಗಭೂಮಿ, ಮತ್ತು ಚಲನಚಿತ್ರ ಜೊತೆಗೆ ಸಮಸ್ತ ಕಲಾವಿದರಸಮ್ಮೇಳನವನ್ನುಆಯೋಜಿಸಲಾಗುವದೆಂದು, ಕನ್ನಡ ಫಿಲಂ ಚೇಂಬರ್ ಕಲಬುರ್ಗಿ ಜಿಲ್ಲಾಧ್ಯಕ್ಷ ಡಾ. ಮಲ್ಲಿಕಾರ್ಜುನ ಎಸ್ ಆಲಮೇಲ ತಿಳಿಸಿದರು.

ಪಟ್ಟಣದ ಶ್ರೀ ವಿರಕ್ತ ಮಠದಲ್ಲಿ ಸರಳವಾಗಿ ಜರುಗಿದ ಕನ್ನಡ ಫಿಲಂ ಚೇಂಬರ್ ಪದಾಧಿಕಾರಿಗಳ ನೇಮಕಾತಿ ಪ್ರಮಾಣ ಪತ್ರ ಪ್ರಧಾನ ಸಮಾರಂಭದಲ್ಲಿ,

ಮಾತನಾಡಿದ ಅವರು, ಕನ್ನಡ ಫಿಲಂ ಚೇಂಬರ್ ಸದಸ್ಯತ್ವವೆನ್ನುವದು ದುಬಾರಿ ಶುಲ್ಕದ ಪರಿಣಾಮವಾಗಿ ಗಗನ ಕುಸುಮವಾಗಿತ್ತು ಆದರೆ ಈಗ ಮೂಲ ಚೇಂಬರ್ ಗೆ ಪರ್ಯಾಯವಾಗಿ ಕನ್ನಡ ಫಿಲಂ ಚೇಂಬರ್ ಗಳು ಸೃಷ್ಟಿಯಾಗಿರುವದರಿಂದ ಸಣ್ಣ ಕಲಾವಿದರಿಗೆ, ನಿರ್ಮಾಪಕರಿಗೆ, ತಂತ್ರಜ್ಞರಿಗೆ ಬಹಳಷ್ಟು ಅನುಕೂಲವಾಗುತ್ತಿದೆ ಆದ–'ರಿಂದ ಎಲ್ಲರೂ ಅದರ ಸದುಪಯೋಗಪಡಿಸಿಕೊಳ್ಳಬೇಕು ಮತ್ತು ಮುಖ್ಯವಾಗಿ ನಮ್ಮ ಭಾಗದ ಕಲಾವಿದರು ಮುನ್ನೆಲೆಗೆ ಬರಬೇಕು, ನಮ್ಮಯ ಕಲಾವಿದರನ್ನು ಚಿತ್ರರಂಗದಿ ಮುನ್ನೆಲೆಗೆ ತರಲು ಕನ್ನಡ ಫಿಲಂ ಚೇಂಬರ್



ಕಂಕಣಬದ್ಧವಾಗಿದೆ, ಅದಕ್ಕಾಗಿ ಸರ್ವರಂಗದ ಸಹಕಾರದ ಅವಶ್ಯವಿದೆ, ಎಲ್ಲರು ಪ್ರೋತ್ಸಾಹ ನೀಡಬೇಕೆಂದು ವಿನಂತಿಸಿದರು. ಕಾರ್ಯಕ್ರಮ ದಿವ್ಯ ಸಾನಿಧ್ಯವಹಿಸಿದ ಪರಮ ಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಪದಾಧಿಕಾರಿಗಳಾದ, ಡಾ. ಮಲ್ಲಿಕಾರ್ಜುನ ಎಸ್ ಆಲಮೇಲ (ಜಿಲ್ಲಾಧ್ಯಕ್ಷರು )

ರಾಜಶೇಖರ ಆರ್ ಡಗ್ಗಾ,( ಉಪಾಧ್ಯಕ್ಷರು )

ಅಮೃತ ದೊಡಮನಿ ( ಉಪಾಧ್ಯಕ್ಷರು )

ಕೆ ಕೆ ದೇಸಾಯಿ( ಪ್ರಧಾನ ಕಾರ್ಯದರ್ಶಿಗಳು )

ರೇವಣಸಿದ್ದಪ್ಪ ಬಿ ಬೆಲ್ಲದ್ (ಪ್ರಧಾನ ಕಾರ್ಯದರ್ಶಿಗಳು) ಚಿಂತನಗೌಡ ಪಾಟೀಲ್ (ಖಜಾಂಚಿ ) ವೀರೇಶ ಕುಂಬಾರ್, ರಮೇಶ ತುಪ್ಪದ್, ಕರೆಪ್ಪ ಹೊಸಮನಿ (ನಿರ್ದೇಶಕರು) ಅವರುಗಳಿಗೆ ನೇಮಕಾತಿ ಪತ್ರ ಪ್ರಧಾನ ಮಾಡಿದರು.

ಈ ಸಂದರ್ಭದಲ್ಲಿ ದೇವಿಂದ್ರಪ್ಪಗೌಡ ಸರಕಾರ, ಮಲ್ಲಾರಾವ್ ಕುಲಕರ್ಣಿ, ಬಸ್ಸೇಟೆಪ್ಪ ವಾರದ್, ಅಪ್ಪು ಪುರಾಣಿಕ್, ಲಕ್ಷ್ಮೀಕಾಂತ ಸೋನಾರ್ ಮತ್ತಿತರರು ಇದ್ದರು.

## ಬೀದಿ ವ್ಯಾಪಾರಿಗಳ ಸಂಘದಿಂದ ನವರಾತ್ರಿ ಉತ್ಸವ–ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ

ಕಲಬುರಗಿ: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಾಡದೇವಿಯ ಕೃಪೆ ಮತ್ತು ಆಶೀರ್ವಾದಿಂದ ಬೀದಿ ವ್ಯಾಪಾರಿಗಳ ಸಂಘ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ನಾಡ ದೇವಿ ಸರ್ವರಿಗೂ ಆರೋಗ್ಯ ಆಯುಷ್ಯ ಮತ್ತು ಸಂಪತನ್ನು ದಯಪಾಲಿಸಲಿ ಎಂದು ಬೀದಿವ್ಯಾಪಾ–ರಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಜಗನ್ನಾಥ ಎಸ್.ಸೂರ್ಯವಂಶಿ ಅವರು ಶುಭ ಹಾರೈಸಿದರು.

ಅಖಿಲ ಕರ್ನಾಟಕ ರಾಜ್ಯ ಬೀದಿ ವ್ಯಾಪಾ–ರಿಗಳ ಸಂಘದ ಆಶ್ರಯದಲ್ಲಿ ನಗರದ ಜಗತ್ ವೃತ್ತ ಅತ್ತರಕಂಪೌಂಡ್ ಗಾಜೀಪೂರದ ಸೂರ್ಯವಂಶಿ ಅವರ ನಿವಾಸದಲ್ಲಿ ಆಯೋಜಿಸಿದ್ದ ನಾಡ ಹಬ್ಬ ಸದರಾ ನವರಾತ್ರಿ ಉತ್ಸವ, ಸೇವಾ ರತ್ನ ಪ್ರಶಸ್ತಿ ಪ್ರದಾನ ಮತ್ತು ಮಹಾಪ್ರಸಾದ ವಿತರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಬೀದಿ ವ್ಯಾಪಾರಿಗಳ ಕಲ್ಯಾಣ–ಕ್ಕಾಗಿ ಹಾಗೂ ಅವರ ಹಕ್ಕುಗಳ ರಕ್ಷಣೆಗಾಗಿ ಸಂಘ ಮುಂಚೂಣಿಯಲ್ಲಿ ನಿಂತು ಹೋರಾಟ ಕೈಗೊಳ್ಳುತ್ತದೆ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ ಅವರು, ಎಲ್ಲ ಸಮುದಾಯವನ್ನು ವಿಶ್ವಾಶಕ್ಕೆ ತೆಗೆದುಕೊಂಡು ಇಂತಹ ವಿಶೇಷ ಕಾರ್ಯಕ್ರಮವನ್ನು ಆಯೋಸುತ್ತಿರುವ ಸೂರ್ಯವಂಶಿ ಅವರು, ಹಲವಾರು ದಶಕಗಳಿಂದ ಬೀದಿ ವ್ಯಾಪಾರಿಗಳಿಗೆ ನ್ಯಾಯಕಲ್ಪಿಸಲು ಶ್ರಮಿಸುತ್ತಿದ್ದಾರೆ ಅವರ ಈ ಜನಪರ ಕಾಳಜಿ ಮತ್ತು ಸೇವೆಗೆ ತಾಯಿ ಜಗದಂಭದೇವಿ ಅನುಗ್ರಹ ನೀಡಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತರು ಮತ್ತು ಸಂಘದ ರಾಜ್ಯ ಉಪಾಧ್ಯಕ್ಷರಾಧ ಭವಾನಿಸಿಂಗ ಠಾಕೂರ ಮಾತನಾಡಿ, ಮಳೆ ಬಿಸಿಲು



ಎನ್ನದೇ ಬೀದಿ ವ್ಯಾಪಾರಿಗಳ ತಮ್ಮ ಕಾಯಕವನ್ನು ಮುಂದುವರೆಸುವ ಮೂಲಕ ನಮ್ಮೆಲ್ಲರಿಗೂ ಅಗತ್ಯ ಮನೆ ಬಳಕೆಯ ತಿನಸಿ ಮತ್ತು ವಸ್ತುಗಳನ್ನು ನೀಡುತ್ತಾರೆ ಅವರ ಸೇವೆಗೆ ಮಾನ್ಯತೆ ಮತ್ತು ನ್ಯಾಯ ಕಲ್ಪಿಸಲು ಸಂಘ ಕಟಿ ಬದ್ಧವಾಗಿದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಸಾಧಕರಾದ ಹಿರಿಯ ಪತ್ರಕರ್ತ ಭೀಮಾಶಂಕರ ಫೀರೋಜಾಬಾದ, ಸಂಗನಾಥ ಹಿರೇಮಠ, ಚಂದ್ರಶೇಖರ ನಾಗನಹಳ್ಳಿ, ನ್ಯಾಯವಾದಿಗಳಾದ ಪ್ರಕಾಶ ಸಿಂಗರ, ಕೆಪಿ ಬಿರಾದಾರ, ಸುಧೀಂದ್ರ ಯಕ್ಕಂಚಿ, ನಿವೃತ್ತ ಪೊಲೀಸ ಅಧಿಕಾರಿ ನಾಗಭೂಷಣ, ಹರಿಬಾ ಜಮಾದಾರ, ಬಸವರಾಜ, ಅಶೋಕ ಗಾಯಕವಾಡ, ವಿಶ್ವನಾಥ ಜಾಧವ, ಅರವಿಂದಕರ ಅವರನ್ನು ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಖ್ಯಅತಿಥಿಗಳಾಗಿ ಮಾಜಿ ಮೇಯರ್ ಭೀಮರೆಡ್ಡಿ ಪಾಟೀಲ, ಡಾ.ಮೈನೋದ್ದೀನ, ನ್ಯಾಯವಾದಿ ಕೆವಿ ಕಲಬುರ್ಗಿ, ಶಾಮ ನಾಟಿಕರ, ರಾಜು ವಾಡೇಕರ್, ರವಿ ರಾಠೋಡ, ಶೇಖರಸಿಂಗ್, ಕೆಪಿ ಬಿರಾದಾರ, ಡಾ.ರೆಡ್ಸನ್ ಸೇರಿದಂತೆ ಗಣ್ಯಮಾನ್ಯರು ಪಾಲ್ಗೊಂಡಿದ್ದರು.

ಸಂಘದ ಪದಾಧಿಕಾರಿಗಳಾದ ಅಮೃತ ಸಿ.ಪಾಟೀಲ ಸಿರನೂರ, ರವಿ ಒಂಟಿ, ಜಗತ್ ಸಿಂಗ್, ಮಹಿಬೂಬ ಶಹಾ ದರವೇಜ, ಚಂದ್ರಾಹಸ ಜೀತ್ರೆ, ಸುಮಾ ಕವಲಗಾ, ಬಾಬು ಪರೀಟ್ ಮತ್ತು ಲೋಹಿಸ ಕೋರಿ, ದತ್ತು ಭಾಸಗಿ ಸೇರಿದಂತೆ ಹಲವರಿದ್ದರು.

# ಸಣ್ಣ ಹೋರಾಟಗಳೇ ಯಶಸ್ಸಿನ ಮೆಟ್ಟಿಲುಗಳು




ಜಯಶ್ರೀ ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ

■ **ಉದಯರಶ್ಮಿ ದಿನಪತ್ರಿಕೆ**

ನಮ್ಮ ಕಣ್ಣಿಗೆ ಅತ್ಯಂತ ಚಿಕ್ಕದಾಗಿ ಕಾಣುವ ಇರುವೆಗೆ ಒಂದು ಸಣ್ಣ ನೀರಿನ ಹನಿ ಕೂಡ ಪ್ರವಾಹದಂತೆ ಭಾಸವಾಗುತ್ತದೆ. ಪ್ರಕೃತಿಯ ಈ ಅದ್ಭುತ ನಿಯಮವನ್ನು ಅರ್ಥಮಾಡಿಕೊಳ್ಳಲು ನಾವು ಚಿಂಟು ಎಂಬ ಪುಟ್ಟ ಇರುವೆಯ ರೋಚಕ ಕಥೆಯನ್ನು ನೋಡಬೇಕು. ಒಂದು ದಿನ ಬೆಳಗಿನ ಜಾವ, ಕಾಡಿನಲ್ಲಿ ಆಹಾರ ಹುಡುಕುತ್ತಿದ್ದ ಚಿಂಟುಗೆ ತೀರ ಬಾಯಾರಿಕೆಯಾಯಿತು. ಹತ್ತಿರದಲ್ಲೇ ಇದ್ದ ಹಸಿರು ಎಲೆಯ ಮೇಲೆ ದೊಡ್ಡದಾದ, ಹೊಳೆಯುವ ನೀರಿನ ಹನಿಯೊಂದು ಇರುವುದನ್ನು ಅದು ಗಮನಿಸಿತು. ಚಿಂಟುಗೆ ಆ ನೀರಿನ ಹನಿ ಎಷ್ಟು ದೊಡ್ಡದಾಗಿ ಕಾಣಿಸಿತೆಂದರೆ, ಅದೊಂದು ದೊಡ್ಡ ಪ್ರವಾಹದಂತೆ ಭಾಸವಾಯಿತು. ಸಾಮಾನ್ಯವಾಗಿದ್ದರೆ ಯಾವುದೇ ಸಣ್ಣ ಜೀವಿ ಅಷ್ಟು ದೊಡ್ಡ ನೀರಿನ ಹನಿಯನ್ನು ನೋಡಿ ಹೆದರಿ ಓಡಿಹೋಗುತ್ತಿತ್ತು. ಆದರೆ ಚಿಂಟು ಧೃತಿಗೆಡಲಿಲ್ಲ. ಅದು ಮೆಲ್ಲನೆ ಎಲೆಯ ಮೇಲೇರಿ, ಸಮತೋಲನ ಕಾಯ್ದುಕೊಂಡು ಆ ನೀರಿನ ಹನಿಯ ಅಂಚಿಗೆ ಸರಿಯಾಗಿ ತಲುಪಿತು. ಪ್ರವಾಹದಂತೆ ಕಂಡ ಆ ನೀರಿನಿಂದಲೇ ತನ್ನ ಬಾಯಾರಿಕೆಯನ್ನು ನೀಗಿಸಿಕೊಂಡು ಯಶಸ್ವಿಯಾಗಿ ಕೆಳಗೆ ಬಂದಿತು. ಈ ಪುಟ್ಟ ಕಥೆ ನಮಗೆ ಕಲಿಸುವುದೇನೆಂದರೆ, ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಅವರದ್ದೇ ಆದ ಹೋರಾಟದ ಪ್ರಮಾಣವಿರುತ್ತದೆ. ಸಮಸ್ಯೆಯ ಗಾತ್ರ ಮುಖ್ಯವಲ್ಲ, ಅದನ್ನು ಎದುರಿಸುವ ಧೈರ್ಯ ಮುಖ್ಯವಾಗಿದೆ.

ಸಣ್ಣ ಹೋರಾಟದಿಂದ ಪಡೆಯುವುದಕ್ಕೆ ಪ್ರಮುಖ ಸಲಹೆಗಳು ಮತ್ತು ನೈಜ ಉದಾಹರಣೆಗಳು ಇಲ್ಲಿವೆ.

**ದೃಷ್ಟಿಕೋನದ ಬದಲಾವಣೆ**

(Change of Perspective)



ನಮ್ಮ ಯೋಚನಾ ಲಹರಿ ಬದಲಾದಾಗ ಇಡೀ ಜಗತ್ತೇ ಬದಲಾಗುತ್ತದೆ. ಚಿಂಟು ಇರುವೆ ನೀರಿನ ಹನಿಯನ್ನು ನೋಡಿ ಹೆದರದೆ, ಅದನ್ನು ತನ್ನ ಬಾಯಾರಿಕೆ ನೀಗಿಸುವ ಅವಕಾಶವಾಗಿ ಕಂಡಿತು. ಹೆನ್ರಿ ಫೋರ್ಡ್ ಹೇಳಿದಂತೆ, "ನೀನು ಸಾಧಿಸಬಲ್ಲೆ ಎಂದು ನಂಬಿದರೂ ಅಥವಾ ಸಾಧಿಸಲು ಸಾಧ್ಯವಿಲ್ಲ ಎಂದುಕೊಂಡರೂ, ಎರಡೂ ಕಡೆ ನೀನು ಯೋಚಿಸಿದ್ದು ನಿಜವೇ ಆಗುತ್ತದೆ." ಇದಕ್ಕೆ ಜಗತ್ತಿನ ಅತ್ಯುತ್ತಮ ಉದಾಹರಣೆ ಥಾಮಸ್ ಆಲ್ವಾ ಎಡಿಸನ್. ವಿದ್ಯುತ್ ದೀಪ ಕಂಡುಹಿಡಿಯುವಾಗ ಸಾವಿರಾರು ಬಾರಿ ಸೋತರೂ, ಅವರು ಅದನ್ನು ಸೋಲಾಗಿ ನೋಡದೆ, "ನಾನು ಸೋತಿಲ್ಲ, ಬದಲಿಗೆ ಕೆಲಸ ಮಾಡದ 10,000 ದಾರಿಗಳನ್ನು ಹುಡುಕಿದ್ದೇನೆ" ಎಂದರು.

**'ಹನಿ ಹನಿ ಗೂಡಿದರೆ ಹಳ್ಳ' ಎಂಬಂತೆ ನಿಮ್ಮ ಸಣ್ಣ ಪ್ರಯತ್ನಗಳೇ ಒಂದು ದಿನ ದೊಡ್ಡ ಯಶಸ್ಸನ್ನು ತಂದುಕೊಡುತ್ತವೆ ಎಂಬುದನ್ನು ಮರೆಯಬೇಡಿ.**

'ಮನಸ್ಸಿದ್ದರೆ ಮಾರ್ಗ' ಎಂಬ ಗಾದೆಯಂತೆ ನಮ್ಮ ಸಕಾರಾತ್ಮಕ ಆಲೋಚನೆಗಳೇ ನಮಗೆ ಹೊಸ ದಾರಿಗಳನ್ನು ತೋರಿಸುತ್ತವೆ.

ಸತತ ಪ್ರಯತ್ನದ ಮಹತ್ವ (Perseverance)

ಯಶಸ್ಸು ಒಂದೇ ದಿನದಲ್ಲಿ ಸಿಗುವಂಥದ್ದಲ್ಲ. ಇರುವೆಯು ತನ್ನ ಗಾತ್ರಕ್ಕಿಂತ ದೊಡ್ಡದಾದ ಸವಾಲನ್ನು ಸತತ ಪ್ರಯತ್ನದಿಂದ ಮೆಟ್ಟಿ ನಿಲ್ಲುತ್ತದೆ. ವಿನ್‌ಸ್ಟನ್ ಚರ್ಚಿಲ್ ಹೇಳುವಂತೆ, "ಯಶಸ್ಸು ಅಂತಿಮವಲ್ಲ, ಸೋಲು ಅಂತಕವಲ್ಲ; ಮುಂದುವರಿಯುವ ಧೈರ್ಯವೇ ಮುಖ್ಯ." ನೈಜ ಜೀವನದಲ್ಲಿ ಹ್ಯಾರಿ ಪಾಟರ್ ಪುಸ್ತಕದ ಲೇಖಕಿ ಜೆ. ಕೆ. ರೌಲಿಂಗ್ ಅವರ ಕಥೆ ಇದಕ್ಕೆ ಸಾಕ್ಷಿ. ತುತ್ತು ಅನ್ನಕ್ಕೂ ಕಷ್ಟವಿದ್ದಾಗ, ಅವರು ಬರೆದ ಕಾದಂಬರಿಯನ್ನು 12 ಪ್ರಕಾಶಕರು ತಿರಸ್ಕರಿಸಿದರು. ಆದರೂ ಧೃತಿಗೆಡದೆ ಪ್ರಯತ್ನಿಸಿ ಇಂದು ವಿಶ್ವದ ಅತ್ಯಂತ ಯಶಸ್ವಿ ಲೇಖಕಿಯಾಗಿದ್ದಾರೆ. 'ಹನಿ ಹನಿ ಗೂಡಿದರೆ ಹಳ್ಳ' ಎಂಬಂತೆ ನಿಮ್ಮ ಸಣ್ಣ ಪ್ರಯತ್ನಗಳೇ ಒಂದು ದಿನ ದೊಡ್ಡ ಯಶಸ್ಸನ್ನು ತಂದುಕೊಡುತ್ತವೆ ಎಂಬುದನ್ನು ಮರೆಯಬೇಡಿ.

**ಹೊಂದಿಕೊಳ್ಳುವ ಗುಣ ಮತ್ತು ಸ್ಥಿತಿಸ್ಥಾಪಕತ್ವ**

(Adaptability)

ಪರಿಸ್ಥಿತಿಗೆ ತಕ್ಕಂತೆ ಬದುಕು ರೂಪಿಸಿಕೊಳ್ಳುವುದು ಯಶಸ್ಸಿನ ರಹಸ್ಯ. ನೀರಿನ ಹನಿಯು ಎಲೆಯ ಮೇಲೆ ನಿಂತಾಗ ಅದು ಬೀಳದಂತೆ ಇರುವೆ ಜಾಗರೂಕತೆಯಿಂದ ಹೊಂದಿಕೊಂಡು ಸಾಗುತ್ತದೆ. "ಕೇವಲ ಬಲಿಷ್ಠವಾದದ್ದಷ್ಟೇ ಬದುಕಿ ಉಳಿಯುವುದಿಲ್ಲ, ಬದಲಿಗೆ ಬದಲಾವಣೆಗೆ ಸ್ಪಂದಿಸುವ ಜೀವಿಯೇ ಉಳಿಯುತ್ತದೆ" ಎಂಬ ಚಾರ್ಲ್ಸ್ ಡಾರ್ವಿನ್ ಅವರ ಮಾತು ಇಲ್ಲಿ ಸೂಕ್ತವಾಗಿದೆ. ನೈಜ ಉದಾಹರಣೆಯಾಗಿ, ಬಾಸ್ಕೆಟ್‌ಬಾಲ್ ದಂತಕಥೆ ಮೈಕೇಲ್ ಜೋರ್ಡಾನ್ ಅವರನ್ನು ಹೈಸ್ಕೂಲ್ ತಂಡದಿಂದ ಕಿತ್ತುಹಾಕಿದಾಗ, ಅವರು ಕುಗ್ಗದೆ ತಮ್ಮ ಆಟದ ಶೈಲಿಯನ್ನು ಬದಲಾಯಿಸಿಕೊಂಡು ಕಠಿಣ ತರಬೇತಿ ಪಡೆದು ಜಗತ್ತಿನ ಶ್ರೇಷ್ಠ ಆಟಗಾರರಾದರು. 'ಬಗ್ಗಿದ ಮರ ಗಾಳಿಗೆ ಮುರಿಯದು' ಎಂಬಂತೆ ನಮ್ರತೆ ಮತ್ತು ನಮ್ಯತೆ ನಮ್ಮಲ್ಲಿ ಇರಬೇಕು.

ಕೃತಜ್ಞತಾ ಭಾವನೆ (Attitude of Gratitude)

ನಮ್ಮ ಬಳಿ ಇರುವುದರಲ್ಲಿ ತೃಪ್ತಿ ಮತ್ತು ಕೃತಜ್ಞತೆ ಪಡುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ. ಇರುವೆಯು ಪ್ರಕೃತಿ ನೀಡಿದ ಸಣ್ಣ ಸಂಪನ್ಮೂಲವನ್ನೇ ಸದುಪಯೋಗ ಪಡಿಸಿಕೊಳ್ಳುತ್ತದೆ. ಆಲ್ಬರ್ಟ್ ಐನ್‌ಸ್ಟೈನ್ ಹೇಳಿದಂತೆ, "ನಮ್ಮ ಜೀವನವನ್ನು ಎರಡು ರೀತಿಯಲ್ಲಿ ಬದುಕಬಹುದು. ಒಂದು ಯಾವುದೂ ಪವಾಡವಲ್ಲ ಎಂದುಕೊಳ್ಳುವುದು, ಮತ್ತೊಂದು ಪ್ರತಿಯೊಂದೂ ಪವಾಡವೆಂದು ನಂಬುವುದು." ಮಾಧ್ಯಮ ದೈತ್ಯ ಓಪ್ರಾ ವಿನ್‌ಫ್ರೇ ಅತ್ಯಂತ ಬಡತನ ಮತ್ತು ಕಷ್ಟದ ಬಾಲ್ಯವನ್ನು ಹೊಂದಿದ್ದರೂ, ತಮಗೆ ಸಿಕ್ಕ ಸಣ್ಣ ಅವಕಾಶಗಳಿಗೇ ಕೃತಜ್ಞರಾಗಿ ದೃಢ ಹೆಜ್ಜೆಯಿಟ್ಟು ಇಂದು ವಿಶ್ವದ ಅತ್ಯಂತ ಪ್ರಭಾವಶಾಲಿ ಮಹಿಳೆಯಾಗಿದ್ದಾರೆ. 'ಕೈಗೆ ಬಂದದ್ದು ತುತ್ತು'



ಎಂದು ಇರುವ ಸೌಕರ್ಯಗಳಲ್ಲೇ ಉತ್ತಮವಾದದ್ದನ್ನು ಸಾಧಿಸಲು ಕೃತಜ್ಞತಾ ಮನೋಭಾವ ನಮಗೆ ಸದಾ ಸಹಾಯ ಮಾಡುತ್ತದೆ.

**ಶಿಸ್ತು ಮತ್ತು ಯೋಜನಾಬದ್ಧತೆ**

(Discipline and Planning)

ಶಿಸ್ತಿನ ಜೀವನವೇ ಯಶಸ್ಸಿನ ಬುನಾದಿ. ಇರುವೆಗಳು ಸದಾ ಸಾಲಿನಲ್ಲಿ ಸಾಗುತ್ತಾ, ಮಳೆಗಾಲಕ್ಕಾಗಿ ಮುಂಚಿತವಾಗಿಯೇ ಆಹಾರವನ್ನು ಸಂಗ್ರಹಿಸಿಡುತ್ತವೆ. 'ಕೂಡಿಟ್ಟ ರೊಟ್ಟಿ ಕೋತಿ ತಿಂದಿತು' ಎಂಬಂತೆ ಶಿಸ್ತಿಲ್ಲದ ಜೀವನ ವ್ಯರ್ಥವಾಗುತ್ತದೆ. ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್ ತಮ್ಮ ಆರಂಭಿಕ ಉದ್ಯಮ 'ಟ್ರಾಫ್-ಓ-ಡೇಟಾ'ದಲ್ಲಿ ತೀವ್ರ ಸೋಲನ್ನು ಕಂಡಾಗ, ಯೋಜನಾಬದ್ಧವಾಗಿ ಮತ್ತಷ್ಟು ಕಠಿಣ ಶಿಸ್ತಿನಿಂದ ಕೆಲಸ ಮಾಡಿ ತಂತ್ರಜ್ಞಾನ ಲೋಕವನ್ನೇ ಬದಲಾಯಿಸಿದರು. ನಿಮ್ಮ ದಿನಚರಿಯಲ್ಲಿ ಶಿಸ್ತು ಅಳವಡಿಸಿಕೊಂಡಾಗ ಸಮಯದ ಸದುಪಯೋಗವಾಗುತ್ತದೆ. ಇಂದಿನ ಸಣ್ಣ ಸಣ್ಣ ಯೋಜನೆಗಳೇ ಭವಿಷ್ಯದ ದೊಡ್ಡ ಗುರಿಗಳನ್ನು ಸುಲಭವಾಗಿ ತಲುಪಲು ನೆರವಾಗುತ್ತವೆ.

**ನಂಬಿಕೆ ಮತ್ತು ಧೈರ್ಯ**

(Self-Belief and Courage)

ನಿಮ್ಮ ಮೇಲಿನ ನಂಬಿಕೆಯೇ ನಿಮ್ಮ ಅತ್ಯಂತ ದೊಡ್ಡ ಶಕ್ತಿ. ನಿಮ್ಮ ಸಾಮರ್ಥ್ಯವನ್ನು ಎಂದಿಗೂ ಕಡಿಮೆ ಅಂದಾಜಿಸಬೇಡಿ. ಚಿಂಟು ಇರುವೆ ತನ್ನ ಗಾತ್ರವನ್ನು ನೋಡಿ ಎಂದೂ ಧೃತಿಗೆಡಲಿಲ್ಲ. 'ಅಲ್ಪ ವಿದ್ಯೆ ಮಹ ಗರ್ವ' ಎನ್ನದೆ, ನಮ್ರತೆಯಿಂದ ಇದ್ದು ನಮ್ಮ ಒಳಗಿನ ಶಕ್ತಿಯನ್ನು ಜಾಗೃತಗೊಳಿಸಬೇಕು. ಹುಟ್ಟಿನಿಂದಲೇ ಕೈಕಾಲುಗಳಿಲ್ಲದ





ನಿಕ್ ವುಯಿಚಿಕ್ ಅವರು ತಮ್ಮ ನ್ಯೂನತೆಯನ್ನೇ ಮೆಟ್ಟಿ ನಿಂತು, ಸ್ವಾವಲಂಬಿ ಜೀವನ ನಡೆಸಿ, ಇಂದು ಕೋಟ್ಯಂತರ ಜನರಿಗೆ ಸ್ಫೂರ್ತಿ ನೀಡುವ ಅಂತರರಾಷ್ಟ್ರೀಯ ವಾಗ್ಮಿಯಾಗಿದ್ದಾರೆ. ಧೈರ್ಯದಿಂದ ಮುನ್ನಡೆದಾಗ ಮಾತ್ರ ಹೊಸ ಹಾದಿಗಳು ಗೋಚರಿಸುತ್ತವೆ. ನಿಮ್ಮ ಗುರಿಯತ್ತ ದೃಢವಾದ ನಂಬಿಕೆಯಿಂದ ಹೆಜ್ಜೆ ಇಟ್ಟಾಗ ಇಡೀ ಬ್ರಹ್ಮಾಂಡವೇ ನಿಮಗೆ ಸಹಾಯ ಮಾಡಲು ಜೊತೆಯಾಗುತ್ತದೆ.

**ಕೊನೆ ಹನಿ**

ಜೀವನ ಎಂಬುದು ಸಣ್ಣ ಮತ್ತು ದೊಡ್ಡ ಸವಾಲುಗಳ ಸುಂದರ ಮಿಶ್ರಣವಾಗಿದೆ. ಯಾವುದೇ ಕಷ್ಟವೂ ಶಾಶ್ವತವಲ್ಲ ಮತ್ತು ಯಾವುದೇ ಯಶಸ್ಸೂ ಅಂತಿಮವಲ್ಲ ಎಂಬುದನ್ನು ನಾವು ಅರಿಯಬೇಕು. ನಮ್ಮ ಆಂತರಿಕ ಶಕ್ತಿಯನ್ನು ನಂಬಿ, ಪ್ರತಿದಿನವೂ ನಗುನಗುತ್ತಾ ಮುನ್ನಡೆಯುವುದೇ ನಿಜವಾದ ವ್ಯಕ್ತಿತ್ವ ವಿಕಸನ. ಸಣ್ಣ ಇರುವೆಯ ಹೋರಾಟದಿಂದ ಮತ್ತು ಜಗತ್ತಿನ ಮಹಾನ್ ಸಾಧಕರಿಂದ ಸ್ಫೂರ್ತಿ ಪಡೆದು, ಧನಾತ್ಮಕ ಚಿಂತನೆಗಳೊಂದಿಗೆ ಸಾಗೋಣ; ನಮ್ಮ ಭವಿಷ್ಯವು ಉಜ್ವಲವಾಗುವುದು ಖಂಡಿತ.



## ಬನ್ನಿ ತಗೊಂಡು ಬಂಗಾರದಂಗ ಇರೋಣ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಸಮಾಜದಲ್ಲಿ ಹಳೆಯ ದ್ವೇಷ, ಮುನಿಸು & ವೈರತ್ವವನ್ನು ಮರೆತು ಪರಸ್ಪರ ಹೊಸ ಸ್ನೇಹ, ಪ್ರೀತಿ & ಗೌರವ ನೀಡುವ ಹಬ್ಬವೇ ವಿಜಯದಶಮಿ ಎಂದು ಪ್ರೊ.ಎಂ.ಎಸ್. ಖೋದನಾಪುರ ಅವರು ಅಭಿಪ್ರಾಯಪಟ್ಟರು.

ಅವರು ನಗರದ ಅಲ್ ಅಮೀನ್ ಆಸ್ಪತ್ರೆ ಎದುರಿಗೆ ಇರುವ ಎನ್.ಜಿ.ಓ. ಕಾಲೋನಿಯ ಆಂಜನೇಯ ದೇವಸ್ಥಾನದಲ್ಲಿ ದಿನಾಂಕ: 21.10.2026 ರಂದು ಜರುಗಿದ "ಬನ್ನಿ ವಿನಿಮಯ ಕಾರ್ಯಕ್ರಮ" ದಲ್ಲಿ ಮಾತನಾಡಿದರು.

ಅವರು ಮಾತನಾಡುತ್ತಾ, ಈ ಬನ್ನಿ ವಿನಿಮಯವು ಕೇವಲ ಧಾರ್ಮಿಕ ಆಚರಣೆಯಲ್ಲ. ಸಮಾಜವನ್ನು ಒಗ್ಗೂಡಿಸುವ, ಪ್ರೀತಿ-ಸ್ನೇಹತ್ವವನ್ನು ಹಂಚುವ ಸಾ0ಸ್ಕೃತಿಕ ಹಬ್ಬವಾಗಿದೆ ಎಂದರು.

ಕಿರಿಯರು ಹಿರಿಯರಿಗೆ ಬನ್ನಿ ಕೊಟ್ಟು ಆಶೀರ್ವಾದ ಪಡೆದರು. ಹಿರಿಯರು ಕಿರಿಯರಿಗೆ ಬನ್ನಿ ಬಂಗಾರ ತಗೊಂಡು ಬಂಗಾರದಂಗ ಬದುಕೋಣ. ಎಲ್ಲರ ಬಾಳು ಬಂಗಾರವಾಗಲಿ ಎಂದು ಹಾರೈಕೆ ನೀಡಿದರು. ಈ ಬನ್ನಿ ವಿನಿಮಯ ಕಾರ್ಯಕ್ರಮದಲ್ಲಿ ನವರಸಪುರದ ವಿವಿಧ ಬಡಾವಣೆಗಳ ಹಿರಿಯರು, ಮಕ್ಕಳು ಮತ್ತು ಮಹಿಳೆಯರು ಸಂಜೆ 6 ಗಂಟೆಗೆ ಆಂಜನೇಯ ದೇವಸ್ಥಾನಕ್ಕೆ ಬನ್ನಿ ವೃಕ್ಷಕ್ಕೆ ಪೂಜೆ ಸಲ್ಲಿಸಿ ಬನ್ನಿ ಮುಡಿದರು. ಈ ಕಾರ್ಯಕ್ರಮ ಜನರಲ್ಲಿ ಮಧುರ ಬಾಂಧವ್ಯ ಬೆಸೆಯುವಲ್ಲಿ ಸಾಕ್ಷಿಯಾಯಿತು.

ಈ ಕಾರ್ಯಕ್ರಮದಲ್ಲಿ ದೇವಸ್ಥಾನದ ಅಧ್ಯಕ್ಷ ಸಂತೋಷ ಪಾಟೀಲ, ಹಿರಿಯರಾದ ಪ್ರೊ. ಮುರುಗೇಶ ಉಕುಮನಾಳಮಠ, ಭೀಮರಾಯ ಬಿರಾದಾರ, ಎಸ.ಜಿ.ನಿಂಗನಗೌಡರ, ಎಸ್. ಎಸ್. ತೆನಿಹಳ್ಳಿ, ಶಿವಾನಂದ ಬಿಜರಗಿ, ನಾನಾಸಾಬ ಕೂಟನೂರ, ಸಿದ್ಧರಾಮ ಹಿರೇಮಠ ಇನ್ನಿತರರು ಉಪಸ್ಥಿತರಿದ್ದರು.



## ಗೃಹ ಸಚಿವ ಪ್ರಿಯಾಂಕ್ ಖರ್ಗೆ ಜೊತೆ ದೂರವಾಣಿಯಲ್ಲಿ ಉತ್ತರಾದಿ ಶ್ರೀಗಳ ಮಾತುಕತೆ– ರಾಜ್ಯ ಸರ್ಕಾರದ ನಿರ್ಧಾರಕ್ಕೆ ಮೆಚ್ಚುಗೆ

ಕಲಬುರಗಿ: ಮಧ್ವಾಚಾರ್ಯರ ಜಯಂತಿಯನ್ನು ಆಚರಿಸಲು ರಾಜ್ಯ ಸರ್ಕಾರ ಆದ-ೇಶ ಹೊರಡಿಸಿರೋದನ್ನ ಸ್ವಾಗತಿಸಿರುವ ಉತ್ತರಾದಿ ಮಠಾಧೀಶರಾದ ಸತ್ಯಾತ್ಮ ತೀರ್ಥ ಶ್ರೀಗಳು, ಕಲಬುರಗಿಯಲ್ಲಿ ಭಕ್ತರು ಸಲ್ಲಿಸಿದ ಈ ಮನವಿಗೆ ತಕ್ಷಣ ಸ್ಪಂದಿಸಿರುವ ಸರ್ಕಾರದ ನಡೆಯನ್ನು ಶ್ಲಾಘಿ-ಸಿದ್ದಾರೆ.

ಹುಬ್ಬಳ್ಳಿಯಲ್ಲಿರುವ ಶ್ರೀಗಳು ದೂರವಾಣಿ ಮೂಲಕ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರೊಂದಿಗೆ ಮಾತನಾಡಿದ್ದು, ತ್ರೈಲೋಕ್ಯಾಚಾರ್ಯರಾಗಿರುವ ಮಧ್ವಾಚಾರ್ಯರ ಜಯಂತಿ ಆಚರಣೆಗೆ ಅಧಿಕೃತ ಆದೇಶ ಹೊರಡಿಸಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸಿ ಮೆಚ್ಚುಗೆ ಮಾತುಗಳನ್ನಾಡಿದ್ದಾರೆ.

ಈ ದೂರವಾಣಿ ಮಾತುಕತೆ ಸಂದರ್ಭದಲ್ಲಿ ಮಧ್ವಾಚಾರ್ಯರ ಜಯಂತಿಯನ್ನು ಆಚ-ರಿಸಲು ಮಹತ್ವದ ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿಗಳಾದಡಿಕೆ ಶಿವಕುಮಾರ್ ಅವರಿಗೂ, ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರಿಗೂ ಶ್ರೀಗಳು ಅಭಿನಂದಿಸಿ ಆಶಿರ್ವದಿಸಿದ್ದಾರೆ.

## ಮಧ್ವಾಚಾರ್ಯರ ಚಿಂತನೆಗಳು ಸಕಾಲಿಕ :ಚನಗೊಂಡ

■ **ಉದಯರಶ್ಮಿ ದಿನಪತ್ರಿಕೆ**



ವಿಜಯಪುರ: ಮಧ್ವಾಚಾರ್ಯರ ಪ್ರತಿಪಾದಿಸಿದ ಚಿಂತನೆಗಳು ಸಕಾಲಿಕವಾಗಿವರ ಎಂದು ತಹಶೀಲ್ದಾರ್ ಪ್ರಶಾಂತ ಚನಗೊಂಡ ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ಶ್ರೀ ಮಧ್ವಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಗಳಲ್ಲಿ ಭಕ್ತಿ, ಜ್ಞಾನ, ಪರಸ್ಪರ ಗೌರವ ಹಾಗೂ ಸಾಮಾಜಿಕ ಸಾಮರಸ್ಯಕ್ಕೆ ವಿಶೇಷ ಆದ್ಯತೆ ನೀಡಲಾಗಿತ್ತು. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಮರಸ್ಯದ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಅವರು ಹೇಳಿದರು.

ಉಪನ್ಯಾಸ ನೀಡಿ, ಪಂಡಿತ ಶ್ರೀ ನರಹರಿ ಆಚ-ಾರ್ಯ ಅವರು, ಶ್ರೀ ಮಧ್ವಾಚಾರ್ಯರ ಜೀವನ, ಆಧ-್ಯಾತ್ಮಿಕ ಸಾಧನೆ, ತಾತ್ವಿಕ ಚಿಂತನೆಗಳು ಹಾಗೂ ಅವರು ಅನುಸರಿಸಿದ ಮಾರ್ಗದ, ತತ್ವಾದರ್ಶಗಳ ಮಹತ್ವವನ್ನು ವಿವರಿಸಿ, ಅವರ ಬೋಧನೆಗಳನ್ನು ಇಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ತಿಳಿಸಿದರು.

ಪ್ರತಿಯೊಬ್ಬರೂ ಭಕ್ತಿಯ ಮೂಲಕ ದೇವರನ್ನು ಆರಾಧಿಸಬಹುದು ಎಂಬ ಸಂದೇಶವನ್ನು ಮಧ್ವಾಚಾರ್ಯರು ಸಾರಿದ್ದಾರೆ. ಭಕ್ತಿಗೆ ಜಾತಿಯ ಹಂಗಿಲ್ಲ ಎಂಬ ಈ ಆಶಯವು ಎಲ್ಲರಿಗೂ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಲು ಅವಕಾಶವಿದೆ ಎಂಬುದನ್ನು ಸಾರುತ್ತದೆ. ಇಂತಹ ಉದಾತ್ತ ಚಿಂತನೆಗಳನ್ನು ಅರಿತುಕೊಂಡು ಸಮಾಜದಲ್ಲಿ ಸಮಾನತೆ, ಪರಸ್ಪರ ಗೌರವ ಮತ್ತು ಸಹಬಾಳ್ವೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ಡಾ. ಮಾಧವ ಗುಡಿ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀಹರಿ ಗೊಳಸಂಗಿ, ನಗರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಘವರಾವ ಹೊಸೂರು, ಗಿರೀಶ್ ಕುಲಕರ್ಣಿ, ರಘೋತ್ತಮ ಅರ್ಜುಣಗಿ, ಪ್ರಕಾಶ ಅಕ್ಕಲಕೋಟ, ಆನಂದ ಕುಲಕರ್ಣಿ, ಹಿರಿಯ ಪತ್ರಕರ್ತ ಗೋಪಾಲ ನಾಯಕ ಹಾಗೂ ಎಸ್.ಎಸ್. ಬೆಟಗೇರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಿಜಯಪುರದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ । ಹುತಾತ್ಮರಿಗೆ ಗೌರವ ನಮನ
## ಪೊಲೀಸ್‌ಸಾರ್ವಜನಿಕರ ಸಹಭಾಗಿತ್ವದಿಂದ ಶಾಂತಿಯುತ ಸಮಾಜ ನಿರ್ಮಾಣ ಸಾಧ್ಯ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಪೊಲೀಸ್ ಸಿಬ್ಬಂದಿಯ ನಿಸ್ವಾರ್ಥ ಸೇವೆ ಮತ್ತು ತ್ಯಾಗ ಸಮಾಜದ ಸುರಕ್ಷತೆಗೆ ಭದ್ರ ಬುನಾದಿಯಾಗಿದ್ದು, ಶಾಂತಿಯುತ ಸಮಾಜ ನಿರ್ಮಾಣ-ಕ್ಕೆ ಪೊಲೀಸ್‌ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹರೀಶ್ ಹೇಳಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ ಗೌರವ ನಮನ ಸಲ್ಲಿಸಿದ ಬಳಿಕ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶಾದ್ಯಂತ ಕರ್ತವ್ಯ ನಿರ್ವಹಿಸುವಾಗ ಹುತಾತ್ಮರಾದ 154 ಪೊಲೀಸ್ ಸಿಬ್ಬಂದಿಯ ಬಲಿದಾನವನ್ನು ಸ್ಮರಿಸಲಾಯಿತು.

ಭಾರತೀಯ ಸಂವಿಧಾನದ ವಿಧಿ 51ಎ ಅಡಿಯಲ್ಲಿ ಪ್ರತಿಯೊಬ್ಬ ನಾಗ-ರಿಕನ ಮೂಲಭೂತ ಕರ್ತವ್ಯಗಳನ್ನು ವಿವರಿಸಲಾಗಿದೆ. ಹಕ್ಕುಗಳ ಬಗ್ಗೆ ಅರಿವು ಹೊಂದಿರುವಂತೆಯೇ ಕರ್ತವ್ಯಗಳ ಬಗ್ಗೆಯೂ ಜಾಗೃತಿ ಹೊಂದುವುದು ಅಗತ್ಯ. ಸಂವಿಧಾನದ ಆಶಯಗಳನ್ನು ಗೌರವಿಸುವುದು, ಕಾನೂನು ಪಾಲಿಸುವುದು ಹಾಗೂ ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಲು ನಾಗರಿಕರು ಪೊಲೀಸರೊಂದಿಗೆ ಸಹಕರಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ. ಆನಂದ್.ಕೆ. ಮಾತನಾಡಿ, ಪೊಲೀಸ್ ಇಲಾಖೆಯ ಕಾರ್ಯವೈಖರಿ ಇತರ ಇಲಾಖೆಗಳಿಂದ ಭಿನ್ನವಾಗಿದೆ. ಸಮಸ್ಯೆಗಳು ಎದುರಾದಾಗ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಿಸುವುದು ಪೊಲೀಸರ ಕರ್ತವ್ಯ. ಪೊಲೀಸ್ ಇಲಾಖೆ ಸಮರ್ಥವಾಗಿ ಕಾರ್ಯನಿರ್ವಹಿಸಿದಾಗ ಸಮಾಜದ ದೈನಂದಿನ ಚಟುವಟಿಕೆಗಳು ಹಾಗೂ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ನಡೆಯಲು ಸಾಧ್ಯ. ಈ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅಪರಾಧ ಸಂಭವಿಸಿದ ಬಳಿಕ ಕ್ರಮ ಕೈಗೊಳ್ಳುವುದರ ಜೊತೆಗೆ ಅವುಗಳನ್ನು ತಡೆಗಟ್ಟಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದೂ ಪೊಲೀಸರ ಪ್ರಮುಖ ಜವಾಬ್ದಾರಿಯಾಗಿದೆ. ರಾತ್ರಿ ಗಸ್ತು, ಸಂಚಾರ ನಿಯಂತ್ರಣ ಹಾಗೂ ನಿರಂತರ




ನಿಗಾ ಮೂಲಕ ಸಾರ್ವಜನಿಕರ ಸುರಕ್ಷತೆಗೆ ಪೊಲೀಸರು ಶ್ರಮಿಸುತ್ತಿದ್ದಾರೆ. ಸಮಾಜದಲ್ಲಿ ಉಂಟಾಗುವ ಸಂಘರ್ಷಗಳು ಮತ್ತು ಇತರ ಸಮಸ್ಯೆಗಳನ್ನು ಬಗೆಹರಿಸಲು ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು. ಪೊಲೀಸ್ ಸಿಬ್ಬಂದಿ ಕರ್ತವ್ಯದ ನಿಮಿತ್ತ ಹಬ್ಬ-ಹರಿದಿನಗಳು ಹಾಗೂ ಕುಟುಂಬದ ವಿಶೇಷ ಸಂದರ್ಭಗಳಲ್ಲಿಯೂ ಕುಟುಂಬದಿಂದ ದೂರವಿರಬೇಕಾಗುತ್ತದೆ. ಅವರ ಸೇವೆಗೆ ಬೆಂಬಲವಾಗಿ ನಿಲ್ಲುವ ಕುಟುಂಬದವರ ತ್ಯಾಗ ಮತ್ತು ಕೊಡುಗೆಯನ್ನೂ ಸಮಾಜ ಗೌರವಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, 1959ರ ಅಕ್ಟೋಬರ್ 21ರಂದು ಭಾರತಚೀನಾ ಗಡಿ ಪ್ರದೇಶದ ಲಡಾಖ್‌ನ ಹಾಟ್ ಸ್ಪ್ರಿಂಗ್ಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಭಾರತೀಯ ಪೊಲೀಸ್ ಸಿಬ್ಬಂದಿ ಮೇಲೆ ನಡೆದ ದಾಳಿಯಲ್ಲಿ ಪ್ರಾಣತ್ಯಾಗ ಮಾಡಿದ ವೀರರ ಸ್ಮರಣಾರ್ಥ ಪ್ರತಿವರ್ಷ ಅಕ್ಟೋಬರ್ 21ರಂದು ಪೊಲೀಸ್ ಹುತಾತ್ಮರ ದಿನಾಚರಣೆ ಆಚರಿಸಲಾಗುತ್ತದೆ. ದೇಶದ ಆಂತರಿಕ ಭದ್ರತೆ ಮತ್ತು ಸಾರ್ವಜನಿಕರ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದ ಪೊಲೀಸ್ ಸಿಬ್ಬಂದಿಯ ಶೌರ್ಯ, ತ್ಯಾಗ ಹಾಗೂ ಕರ್ತವ್ಯನಿಷ್ಠೆ ಎಲ್ಲರಿಗೂ ಸ್ಫೂರ್ತಿಯಾಗಿದೆ. ಅವರ ಬಲಿದಾನವನ್ನು ಸದಾ ಸ್ಮರಿಸಿ ಗೌರವಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಜಯಪುರ ಉಪ ವಿಭಾಗಾಧಿಕಾರಿ ಜೂಫಿಶಾನ ಹಕ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾ-ರಿಗಳು, ಸಿಬ್ಬಂದಿ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಪೊಲೀಸ್ ಕುಟುಂಬಸ್ಥರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಹುತಾತ್ಮರಾದ ಪೊಲೀಸ್ ಗೌರವ ನಮನ ಸಲ್ಲಿಸಲಾಯಿತು.



## ತಗಡೂರಿನಲ್ಲಿ ವಿಜಯದಶಮಿ ಹಬ್ಬದ ಸಂಭ್ರಮ

**ಉದಯರಶ್ಮಿ ದಿನಪತ್ರಿಕೆ**

ನುಗ್ಗೇಹಳ್ಳಿ: ಚನ್ನರಾಯಪಟ್ಟಣ ತಾಲೂಕು ತಗಡೂರು ಗ್ರಾಮದಲ್ಲಿ ಗಣೇಶೋತ್ಸವ ಮತ್ತು ವಿಜಯದಶಮಿ ಸಂಭ್ರಮ ಸಗಡರದಿಂದ ನಡೆಯಿತು.

ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವರ ಜೊತೆಗೆ ಗಣಪತಿಯ ಮೆರವಣಿಗೆ ಗ್ರಾಮದ ಬೀದಿಯಲ್ಲಿ ಸಾಗಿ ಬನ್ನಿ ಮಂಟಪ ತಲುಪಿತು. ಈ ಸಂದರ್ಭದಲ್ಲಿ ಮಹಾ ಮಂಗಳಾರತಿ ಬಳಿಕ ವಿಜಯದಶಮಿ ಪ್ರಯುಕ್ತ ಅಂಬು ಹಾಯುವುದಕ್ಕೆ ಚಾಲನೆ ನೀಡಲಾಯಿತು.

ಲಿಂಗದವೀರರ ಕುಣಿತ, ತಗಡೂರು ಸುಗ್ಗಿ ಕುಣಿತ, ಹಲಗೆ ಕುಣಿತ ಮತ್ತಿತರ ಕಾರ್ಯಕ್ರಮಗಳು ನಡೆದವು. ಬಳಿಕ ತತ್ಸಂಪ್ರದಾಯದಂತೆ ಬನ್ನಿ ಮಂಟಪದಿಂದ ಬಾಳೆ ಗಿಡಕ್ಕೆ ಕೋವಿ ಹೊಡೆಯುವ ಮೂಲಕ ವಿಜಯದಶಮಿ ಹಬ್ಬವನ್ನು ಸಂಭ್ರಮಿಸಲಾಯಿತು. ಬಳಿಕ ಸಾಮೂಹಿಕವಾಗಿ ಪ್ರಸಾದ ವಿತರಣೆ ನಡೆಯಿತು. ಗಣಪತಿಯನ್ನು ಊರ ಕೆರೆಯಲ್ಲಿ ವಿಸರ್ಜನೆ ಮಾಡಲಾಯಿತು.

ಮೈಸೂರು ಅರಮನೆಯಲ್ಲಿ ಅರಸರು ವಿಜಯದಶಮಿ ಹಬ್ಬ ಆಚರಣೆ ಮಾಡುವ ಮಾದರಿಯಲ್ಲಿಯೇ ತಗಡೂರಿನಲ್ಲಿಯೂ ಬನ್ನಿ ಮಂಟಪದ ಬಳಿ ವಿಜಯದಶಮಿ ಹಬ್ಬ ಆಚರಣೆ ಮಾಡಿಕೊಂಡು ಬಂದಿರುವುದು ವಿಶೇಷ.

ವಿಜಯದಶಮಿ ಹಬ್ಬದ ಸಂಭ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಸೇರಿದಂತೆ ಗ್ರಾಮದ ಪ್ರಮುಖರು, ಗಣ್ಯರು ಭಾಗವಹಿಸಿದ್ದರು



## ಉಚಿತ ಆರೋಗ್ಯ ತಪಾಸಣಾ ಶಿಬಿರ ಆರಂಭ

**ಉದಯರಶ್ಮಿ ದಿನಪತ್ರಿಕೆ**

ಆಲಮೇಲ: ತುಳಜಾಪುರ ಶ್ರೀ ಅಂಬಾಭವಾನಿ ಪಾದಯಾತ್ರೆಯಲ್ಲಿ ಸಾಗುವ ಭಕ್ತಾದಿಗಳ ಆರೋಗ್ಯದ ಹಿತದೃಷ್ಟಿಯಿಂದ, ಕನಸು ಫೌಂಡೇಶನ್ ವತಿಯಿಂದ ಬಸವರಾಜ್ ಹೂಗಾರ್ ಅವರ ನೇತೃತ್ವದಲ್ಲಿ ಹಲಸಂಗಿ ಕ್ರಾಸ್‌ನ ಆರ್‌ಟಿಒ ಚೆಕ್‌ಪೋಸ್ಟ್ ಹತ್ತಿರ, ವಿರಾಮ್ ಹೋಟೆಲ್ ಎದುರು ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ವೈದ್ಯಕೀಯ ಸೇವೆಯನ್ನು ಆರಂಭಿಸಲಾಯಿತು. ಪಾದಯಾತ್ರೆಯಲ್ಲಿ ಸಾಗುವ ಭಕ್ತಾದಿಗಳಿಗೆ ಅಗತ್ಯ ವೈದ್ಯಕೀಯ ನೆರವು ಒದಗಿಸುವ ಉದ್ದೇಶದಿಂದ ಈ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಭಕ್ತಾದಿಗಳ ಆರೋಗ್ಯದ ಕಾಳಜಿ ವಹಿಸುವುದರ ಜೊತೆಗೆ ಮಾನವೀಯತೆ ಮತ್ತು ಸೇವಾ ಮನೋಭಾವವನ್ನು ಸಾರುವ ಉದ್ದೇಶದಿಂದ ಕನಸು ಫೌಂಡೇಶನ್ ಈ ಕಾರ್ಯಕ್ಕೆ ಮುಂದಾಗಿದೆ.

## ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನ

**ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: 2026-27ನೇ ಸಾಲಿನಲ್ಲಿ ವಿಜಯಪುರ ಜಿಲ್ಲಾ ಪಂಚಾಯಿತಿಯ ಗ್ರಾಮೀಣ ಮತ್ತು ಚಿಕ್ಕ ಉದ್ಯಮ ವಿಭಾಗದ ಅಧೀನದಲ್ಲಿರುವ ಜಿಲ್ಲಾ ಪಂಚಾಯಿತಿ ಮುದ್ರಣಾಲಯದ ವತಿಯಿಂದ ಅರ್ಹ ಅಭ್ಯರ್ಥಿಗಳಿಗೆ ಒಂದು ತಿಂಗಳ ಅವಧಿಯ ಉಚಿತ ಕಂಪ್ಯೂಟರ್ ತರಬೇತಿಗೆ ಜಿಲ್ಲೆಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಪಡೆಯುವ ಪ್ರತಿ ಅಭ್ಯರ್ಥಿಗೆ 1,500 ರೂ. ಸಹಾಯಧನ ನೀಡಲಾಗುತ್ತದೆ. ಅಭ್ಯರ್ಥಿಗಳನ್ನು ಸ್ವಯಂ ಉದ್ಯೋಗಿಗಳನ್ನಾಗಿ ರೂಪಿಸುವ ಉದ್ದೇಶ ಈ ತರಬೇತಿಯದ್ದಾಗಿದೆ.

ಅರ್ಹತೆ ಮತ್ತು ವಯೋಮಿತಿ: ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45 ವರ್ಷ ವಯೋಮಿತಿಯೊಳಗಿರಬೇಕು. ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು. ಅರ್ಜಿ ಸಲ್ಲಿಕೆ: ಅರ್ಜಿ ನಮೂನೆಗಳನ್ನು ಉಪನಿರ್ದೇಶಕರು (ಗ್ರಾ.ಕೈ), ಗ್ರಾಮೀಣ ಮತ್ತು ಚಿಕ್ಕ ಉದ್ಯಮ ವಿಭಾಗ, ಜಿಲ್ಲಾ ಪಂಚಾಯಿತಿ ವಿಜಯಪುರ ಕಚೇರಿಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅ.30ರ ಸಂಜೆ 5.30 ಗಂಟೆಯೊಳಗೆ ಅರ್ಜಿಗಳನ್ನು ಉಪನಿರ್ದೇಶಕರು (ಗ್ರಾ.ಕೈ), ಗ್ರಾಮೀಣ ಮತ್ತು ಚಿಕ್ಕ ಉದ್ಯಮ ವಿಭಾಗ, ಜಿಲ್ಲಾ ಪಂಚಾಯಿತಿ ವಿಜಯಪುರ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿ ಆವರಣ, ಸ್ಟೇಷನ್ ಬ್ಯಾಕ್ ರೋಡ್, ಶಿಕಾರಖಾನೆ, ವಿಜಯಪುರ ಇಲ್ಲಿಗೆ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ಮೊಬೈಲ ಸಂಖ್ಯೆ: 9972162222-9448644220 ಉಪನಿರ್ದೇಶಕರು ಹಾಗೂ ಮೇಲ್ವಿಚಾರಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಗ್ರಾಮೀಣ ಮತ್ತು ಚಿಕ್ಕ ಉದ್ಯಮ ವಿಭಾಗದ ಉಪನಿರ್ದೇಶಕರು (ಗ್ರಾ.ಕೈ), ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

**ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಆಲಮಟ್ಟಿ ಲಾಲಬಹದ್ದೂರ ಶಾಸ್ತ್ರಿ ಜಲಾಶಯದಿಂದ ಕೆಪಿಸಿಎಲ್ ಮೂಲಕ ನಾರಾಯಣಪುರ ಜಲಾಶಯಕ್ಕೆ ರಾತ್ರೋ ರಾತ್ರಿ ಪ್ರತಿ ನಿತ್ಯ 45000 ಕ್ಯೂಸೆಕ್ ವರೆಗೆ ನೀರು ಹರಿಸಲಾಗುತ್ತಿದ್ದು ಮುಂದೆ ನಾರಾಯಣಪುರ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ನೀರು ಕೊಡುವ ಹುನ್ನಾರ ರಾಜ್ಯ ಸರ್ಕಾರ ನಡೆಸುತ್ತಿದೆ ಕೂಡಲೇ ನೀರು ಹರಿಸುವುದನ್ನು ಸ್ಥಗಿತಗೊಳಿಸಬೇಕು, ಇಲ್ಲದಿದ್ದರೆ ಆಲಮಟ್ಟಿ ಜಲಾಶಯಕ್ಕೆ ಇಳಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹಾಗೂ ಭಾರತೀಯ ಕಿಸಾನ ಸಂಘದ ರಾಜ್ಯ ಉಪಾಧ್ಯಕ್ಷರಾದ ಗುರುನಾಥ ಬಗಲಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಇದೇ ತಿಂಗಳು 19ರಿಂದ ಗುರುವಾರದವರೆಗೂ ನಿರಂತರ ನೀರು ಹರಿಸುತ್ತಿದ್ದು ಒಟ್ಟು 7 ಟಿಎಂಸಿ ನೀರನ್ನು ನಾರಾಯಣಪುರ ಜಲಾಶಯಕ್ಕೆ ಹರಿಬಿಡಲಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ಗುರುವಾರದಂದು ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಾದ ಆನಂದ ಕೆ. ಅವರ ಮೂಲಕ ಮಾನ್ಯ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅರವಿಂದ ಕುಲಕರ್ಣಿ ಅವರು, ನಾರಾಯಣಪುರ ಜಲಾಶಯಕ್ಕೆ ಹಂತ ಹಂತವಾಗಿ ಬಿಡುವ ಬದಲು ಏಕಾ ಏಕಿ ಹೆಚ್ಚಿನ ಪ್ರಮಾಣ ನೀರು ಹರಿಸುತ್ತಿರುವುದರ ಹಿಂದೆ ತೆಲಂಗಾಣ ರಾಜ್ಯಕ್ಕೆ ನೀರು ಹರಿಸುವ ಉದ್ದೇಶವಿದೆ. ಹಬ್ಬದ ವಾತಾವರಣದಲ್ಲಿ ರೈತರು ಗಮನ ನೀರಿನ ಕಡೆ ಇರುವುದಿಲ್ಲ. ಹಬ್ಬದ ಸಂಭ್ರಮದಲ್ಲಿ ತೊಡಗಿರುತ್ತಾರೆ ಇದೇ ನಮಗೆ ಸೂಕ್ತ ಸಮಯವೆಂದು ರಾತ್ರಿ ವೇಳೆ ನೀರು ಹರಿಸಿದರೆ ಯಾರಿಗೂ ಗೊತ್ತಾಗುವುದಿಲ್ಲ ಎಂಬ ಕುತಂತ್ರ ಬುದ್ಧಿಯಿಂದ ರಾಜ್ಯ ಸರ್ಕಾರ ನೀರು ಹರಿಸುತ್ತಿದೆ. ಕೇವಲ ಮೂರ್ನಾಲ್ಕು ದಿನಗಳಲ್ಲಿ 7 ಟಿಎಂಸಿ ನೀರು ಹರಿದು ಹೋಗಿದೆ. ಎರಡು ಮೂರು ದಿನಗಳವರೆಗೆ ನೀರು ಹರಿಸಿದರೆ ಸುಮಾರು 12 ಟಿಎಂಸಿ ಅಡಿಯವರೆಗೆ ನೀರು ಹರಿದು ಹೋಗುವ ಸಾಧ್ಯತೆ ಇದೆ. ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ತಕ್ಷಣ ನೀರು ಹರಿಸುವುದನ್ನು ಈಗಲೇ ನಿಲ್ಲಿಸಬೇಕು ಇಲ್ಲದಿದ್ದರೆ ಆಲಮಟ್ಟಿ ಜಲಾಶಯದಲ್ಲಿ ಇಳಿದು ಉಗ್ರವಾದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅರವಿಂದ ಕುಲಕರ್ಣಿ ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದ್ದಾರೆ.

ಪ್ರತಿಭಟನೆಯಲ್ಲಿ ಹಣಮಂತ್ರಾಯ ಹಂದ್ರಾಳ, ಚಂದ್ರಾಮ ತೆಗ್ಗಿ, ಗೌಡಪ್ಪ ಬಿರಾದಾರ, ರಾಯಪ್ಪಗೌಡ ಪುಲೇಶಿ, ನಾಗರಾಜ ವಂದಾಲ, ರಾಯಪ್ಪ ಸಂಕನಾಳ, ಬಸವರಾಜ ಬಿರಾದಾರ, ಮಲ್ಲಿಕಾರ್ಜುನ ಬಟಗಿ, ರಾಜು ವಂದಾಲ, ಸಂತೋಷ ಬಿರಾದಾರ, ಶ್ರೀಶೈಲ ಸಾಸನೂರ, ಮುತ್ತಣ್ಣ ಇಟಗಿ, ಶಿವಾನಂದ ಬಿರಾದಾರ, ಬನ್ನೆಪ್ಪ ಜೋಗಿ, ನಿಂಗಪ್ಪ ಕೋರವಾರ, ಮಲ್ಲನಗೌಡ ಪಾಟೀಲ ಡೋಮನಾಳ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ನಿವರಗಿಯಲ್ಲಿ ಹತ್ತಿಗೆ ಆಕಸ್ಮಿಕ ಬೆಂಕಿ: 2.70 ಲಕ್ಷ ನಷ್ಟ!

**ಉದಯರಶ್ಮಿ ದಿನಪತ್ರಿಕೆ**



ಚಡಚಣ: ಮನೆಯ ಪಕ್ಕದಲ್ಲಿ ಬಿಡಿಸಿ ಸಂಗ್ರಹಿಸಿಟ್ಟಿದ್ದ ಹತ್ತಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಸುಮಾರು 2.70 ಲಕ್ಷ ರೂ. ಮೌಲ್ಯದ ಹತ್ತಿ ಬೆಳೆ ಸುಟ್ಟು ಭಸ್ಮವಾದ ಘಟನೆ ಸಮೀಪದ ನಿವರಗಿ ಗ್ರಾಮದಲ್ಲಿ ಅ.20ರಂದು ನಡೆದಿದೆ.

ಗ್ರಾಮದ ನಿವಾಸಿ ನಾಗಪ್ಪ ಪ್ರಭು ಹೂಗಾರ (64) ಎಂಬ ಬಡ ರೈತ ಈ ಘಟನೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿವರಗಿ ಗ್ರಾಮದ ಸರ್ವೇ ನಂ. 231ಅ/1ರಲ್ಲಿರುವ ತಮ್ಮ ಜಮೀನಿನಲ್ಲಿ ಹತ್ತಿ ಬೆಳೆದಿದ್ದ ಅವರು, ಹೊಲದಿಂದ ಹತ್ತಿಯನ್ನು ಬಿಡಿಸಿ ಮನೆಯ ಪಕ್ಕದಲ್ಲಿ ಸಂಗ್ರಹಿಸಿಟ್ಟಿದ್ದರು. ಅ.20ರಂದು ಮಧ್ಯಾಹ್ನ ಸುಮಾರು 12.45ರ ವೇಳೆಗೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಅಂದಾಜು 26 ಕ್ವಿಂಟಲ್ ಹತ್ತಿ ಬೆಂಕಿಗೆ ಆಹುತಿಯಾಗಿದೆ. ಇದರಿಂದ ಸುಮಾರು 2,65,600 ಮೌಲ್ಯದ ಹತ್ತಿ ನಷ್ಟವಾಗಿದೆ ಎಂದು ತಿಳಿದುಬಂದಿದೆ.

ಈಗಾಗಲೇ ಮಳೆ ಕೊರತೆಯಿಂದ ಬೆಳೆ ನಿರೀಕ್ಷಿತ ಮಟ್ಟದಲ್ಲಿ ಬಾರದೆ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ರೈತನಿಗೆ, ಕೈಗೆ ಬಂದ ಹತ್ತಿಯೂ ಬೆಂಕಿಯಲ್ಲಿ ಸುಟ್ಟುಹೋಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೃಷಿಗಾಗಿ ಸಾಲ ಮಾಡಿಕೊಂಡಿದ್ದ ರೈತ, ಬೆಳೆದ ಬೆಳೆಯಿಂದ ಆದಾಯ ಪಡೆಯುವ ನಿರೀಕ್ಷೆಯಲ್ಲಿದ್ದರು. ಆದರೆ, ಆಕಸ್ಮಿಕ ಬೆಂಕಿ ಅವರ ನಿರೀಕ್ಷೆಗೆ ತಣ್ಣೀರೆರಚಿದ್ದು, ಮುಂದಿನ ಜೀವನ ನಿರ್ವಹಣೆ ಹಾಗೂ ಸಾಲ ಮರುಪಾವತಿ ಹೇಗೆ ಎಂಬ ಚಿಂತೆ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಬೆಳೆ ನಷ್ಟವನ್ನು ಸಮಗ್ರವಾಗಿ ಪರಿಶೀಲಿಸಿ, ಸರ್ಕಾರದ ನಿಯಮಾನುಸಾರ ಪರಿಹಾರ ದೊರಕಿಸಿಕೊಡಬೇಕು ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಚಡಚಣ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಂಎಲ್ಸಿ ಸುನೀಲಗೌಡ ಪಾಟೀಲ ಬನ್ನಿ ವಿನಿಮಯ

**ಉದಯರಶ್ಮಿ ದಿನಪತ್ರಿಕೆ**



ವಿಜಯಪುರ: ವಿಜಯದಶಮಿ ಮತ್ತು ದಸರಾ ಹಬ್ಬದ ಅಂಗವಾಗಿ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ಇಂದು ಗುರುವಾರ ಸಾರ್ವಜನಿಕರೊಂದಿಗೆ ಬನ್ನಿ ವಿನಿಮಯ ಮಾಡಿಕೊಂಡರು.

ನಗರದ ಬಿ. ಎಂ. ಪಾಟೀಲ(ಸೋಲಾಪುರ) ರಸ್ತೆಯ ಪಾಟೀಲ ಗಾರ್ಡನಿಯಾ ಹಿಂದುಗಡೆ ಇರುವ ತಮ್ಮ ಗೃಹ ಕಚೇರಿಯಲ್ಲಿ ಶಾಸಕರು ಸಾರ್ವಜನಿಕರೊಂದಿಗೆ ದಸರಾ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ನಾನಾ ತಾಲೂಕುಗಳು ಹಾಗೂ ನೆರೆಯ ಮಹಾರಾಷ್ಟ್ರದಿಂದಲೂ ಆಗಮಿಸಿದ್ದ ರೈತರು, ಸಾರ್ವಜನಿಕರು, ಗಣ್ಯರು, ಹಿತೈಷಿಗಳು, ಅಭಿಮಾನಿಗಳು, ನಾನಾ ಮುಖಂಡರು, ಹಿರಿಯರು, ಮಹಿಳೆಯರು ಹಾಗೂ ಯುವಕರು ಬೆಳಿಗ್ಗೆಯಿಂದಲೇ ಶಾಸಕರ ಗೃಹ ಕಚೇರಿಗೆ ಆಗಮಿಸಿ ಶುಭಾಶಯ ಕೋರಿದರು. ತಂಡೋಪ ತಂಡವಾಗಿ ಆಗಮಿಸಿದ ಸಾರ್ವಜನಿಕರಿಗೆ ಶಾಸಕರು ಕೂಡ ಬೆಳಿಗ್ಗೆಯಿಂದ ರಾತ್ರಿಯವರೆಗೂ ಬನ್ನಿ ನೀಡಿ ದಸರಾ ಹಬ್ಬದ ಶುಭ ಕೋರಿದರು.

# ಕೆಂಭಾವಿ ಹಿರಿಯ ವರ್ತಕ ಸುಮಿತ್ರಪ್ಪ ಸಾಹು ಇನ್ನಿಲ್ಲ!

**ಉದಯರಶ್ಮಿ ದಿನಪತ್ರಿಕೆ**



ಕೆಂಭಾವಿ: ಪಟ್ಟಣದ ನಿವಾಸಿ ಹಾಗೂ ಹಿರಿಯ ಜೀವಿ ಸುಮಿತ್ರಪ್ಪ ಸಾಹು ಅಂಗಡಿ ಅವರು ಬುಧವಾರ ನಿಧನರಾದರು. ಮೃತರು ಪತ್ನಿ, ಮೂರು ಜನ ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಮಧ್ಯಾಹ್ನ 3 ಗಂಟೆಗೆ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.ಸಂತಾಪ:ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದ ಕೆಂಭಾವಿಯ ಹಿರಿಯ ವರ್ತಕ ಸುಮಿತ್ರಪ್ಪ ಸಾಹು ಅಂಗಡಿ ಅವರ ಅಗಲಿಕೆಗೆ ಹಿರೇಮಠದ ಪೀಠಾಧಿಪತಿ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮೀಜಿಗಳು ಸೇರಿದಂತೆ ಜಿಲ್ಲೆಯ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಹಲವು ಮುಖಂಡರು ತೀವ್ರ ಸಂತಾಪ ಸೂಚಿಸಿದ್ದಾರೆ. ಹಾಲಿ ಶಾಸಕ ಶರಣಬಸಪ್ಪಗೌಡ ದರ್ಶನಾಪುರ, ಮಾಜಿ ಶಾಸಕ ಗುರು ಪಾಟೀಲ್ ಶಿರವಾಳ, ನಿಕಟಪೂರ್ವ ಬಿಜೆಪಿ ಜಿಲ್ಲಾಧ್ಯಕ್ಷ ಅಮೀನರಡ್ಡಿ ಪಾಟೀಲ್ ಯಾಳಗಿ, ಹಿರಿಯ ಸಾಹಿತಿ ಲಿಂಗನಗೌಡ ಮಾಲಿಪಾಟೀಲ್, ಜಿ.ಪಂ. ಮಾಜಿ ಅಧ್ಯಕ್ಷ ಸಿದ್ದನಗೌಡ ಪೊ. ಪಾಟೀಲ್, ಜಿಲ್ಲಾ ಕಸಾಪ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ, ಹೈಕೋರ್ಟ್ ನ್ಯಾಯವಾದಿ ಜೆ. ಅಗಷ್ಟಿನ್, ವಾಮನರಾವ್ ದೇಶಪಾಂಡೆ, ಹಿರಿಯ ಸಾಹಿತಿ ಶ್ರೀನಿವಾಸ್ ಜಾಲವಾದಿ, ಬಸವರಾಜ್ ಜಮದರಖಾನಿ, ನಿವೃತ್ತ ಡಿ.ವೈ.ಎಸ್.ಪಿ. ಸಿ.ಎನ್. ಭಂಡಾರೆ, ತಾಲೂಕು ಕಸಾಪ ಅಧ್ಯಕ್ಷ ಶರಣಬಸ್ಸು ಯಾಳವಾರ, ಹೆಚ್ ರಾಠೋಡ್ ಪ್ರಕಾಶ ಅಂಗಡಿ, ನಬಿಲಾಲ ಮಕಂದಾರ್, ಸಂಜೀವರಾವ್ ಕುಲ್ಕರ್ಣಿ, ಮೋಹನರಡ್ಡಿ ಡಿಗ್ಗಾವಿ, ಅಶೋಕ ಸೊನ್ನದ್, ಬಸಣ್ಣ ಸಾಹು ಬೂದೂರ, ಡಾ. ಯಂಕನಗೌಡ ಪಾಟೀಲ್, ವೀರಣ್ಣ ಕಲಕೇರಿ, ನಿಂಗನಗೌಡ ದೇಸಾಯಿ, ಸಂಗಣ್ಣ ಸಾಹು ತುಂಬಗಿ, ರವಿಶಂಕರ್ ಸೊನ್ನದ್, ಸಾಹೇಬಲಾಲ್ ಆಂದೆಲಿ, ಮಡಿವಾಳಪ್ಪ ಹೆಗ್ಗಣದೊಡ್ಡಿ ಸೇರಿದಂತೆ ಜಿಲ್ಲೆಯ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ವರ್ತಕರ ಬಳಗ ಮತ್ತು ಮುಖಂಡರು ಮೃತರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

### 'ಉದಯರಶ್ಮಿ' ಬಳಗದಿಂದ ಭಾವಪೂರ್ಣ ಶ್ರದ್ಧಾಂಜಲಿ

ಕೆಂಭಾವಿಯ ಹಿರಿಯ ವರ್ತಕ ಸುಮಿತ್ರಪ್ಪ ಸಾಹು ಅಂಗಡಿ ನಿಧನಕ್ಕೆ "ಉದಯರಶ್ಮಿ" ದಿನಪತ್ರಿಕೆ ಸಂಪಾದಕ ಇಂದುಶೇಖರ ಮಣೂರ ಹಾಗೂ ಕುಟುಂಬ ವರ್ಗ ಮತ್ತು ಪತ್ರಿಕಾ ಬಳಗ ಸಂತಾಪ ವ್ಯಕ್ತಪಡಿಸಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಭಗವಂತ ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

# ಮಧ್ವಾಚಾರ್ಯರ ದ್ವೈತ ಸಿದ್ಧಾಂತ ಕುರಿತು ಅರಿಯಬೇಕು

**ಉದಯರಶ್ಮಿ ದಿನಪತ್ರಿಕೆ**




ದೇವರಹಿಪ್ಪರಗಿ: ಮಧ್ವಾಚಾರ್ಯರ ಪ್ರತಿಪಾದಿಸಿದ ದ್ವೈತ ಸಿದ್ಧಾಂತದ ತತ್ವ, ವಿಚಾರಗಳ ಕುರಿತು ನಾವು ಅರಿಯಬೇಕಾಗಿದೆ ಎಂದು ಗ್ರೇಡ್-2 ತಹಶೀಲ್ದಾರ ಎಂ.ಜಿ.ಬಿರಾದಾರ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ಬುಧವಾರ ಶ್ರೀಮಧ್ವಾಚಾರ್ಯರ 788 ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಚಾರ್ಯರಲ್ಲಿ ಪ್ರಮುಖರಾದ ಶ್ರೀಮಧ್ವಾಚಾರ್ಯರ ಕುರಿತು ಸರ್ಕಾರ ಪ್ರತಿವರ್ಷ ಅಕ್ಟೋಬರ್ 21ರಂದು ಅಧಿಕೃತವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಯಂತಿ ಆಚರಿಸಲು ಆದೇಶಿಸಿರುವುದು ಶ್ಲಾಘನೀಯ ಎಂದರು.

ವೈದ್ಯ ಆರ್.ಆರ್.ನಾಯಿಕ್, ಚೈತನ್ಯ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಕೆ.ಕುಲಕರ್ಣಿ ಹಾಗೂ ಸಿಂದಗಿ ಪದ್ಮರಾಜ ಮಹಿಳಾ ಕಾಲೇಜಿನ ಉಪನ್ಯಾಸಕ ಗಿರೀಶ ಕುಲಕರ್ಣಿ, ಶಿಕ್ಷಕ ಜಿ.ಪಿ.ಬಿರಾದಾರ ಮಾತನಾಡಿದರು.

ಶಿರಸ್ತೇದಾರ ಸುರೇಶ ಮ್ಯಾಗೇರಿ, ಚಿದಂಬರ ಸೇವಾ ಸಮಿತಿ ಅಧ್ಯಕ್ಷ ನರೇಂದ್ರ ನಾಡಗೌಡ, ವಿಪ್ರ ಸಮುದಾಯದ ಪ್ರಮುಖರಾದ ಪಾಂಡು ದೇಶಪಾಂಡೆ, ವೆಂಕಟೇಶ ಕುಲಕರ್ಣಿ,ಚಿದಂಬರ ಕುಲಕರ್ಣಿ(ಹಂಚಲಿ), ಶ್ರೀಧರ ನಾಡಗೌಡ, ಪ್ರಸಾದ ಕುಲಕರ್ಣಿ, ಪ್ರವೀಣ ಕುಲಕರ್ಣಿ, ಗ್ರಾಮಾಡಳಿತಾಧಿಕಾರಿ ರಮಾನಂದ ಚಕ್ಕಡಿ, ಚನ್ನಬಸು ಹೊಸಮನಿ, ಸುರೇಶ ಇದ್ದರು.

## ಅ.26ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

**ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.26ರಂದು ಸೋಮವಾರ ಬೆಳಿಗ್ಗೆ 10:30 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 9:30 ಗಂಟೆಗೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಶ್ರೀ ಮಹರ್ಷಿ ವಾಲ್ಮೀಕಿ ರವರ ಭಾವಚಿತ್ರದ ಭವ್ಯ ಮೆರವಣಿಗೆಯು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ನಡೆಯಲಿದೆ. ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ. ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

# ಸೌಹಾರ್ದತೆ, ಸಂಬಂಧ ಬೆಸೆವ ಬನ್ನಿ ವಿನಿಮಯ :ರಾಜುಗೌಡ

**ಉದಯರಶ್ಮಿ ದಿನಪತ್ರಿಕೆ**



ತಾಳಿಕೋಟೆ: ನವರಾತ್ರಿ ಉತ್ಸವ ಹಾಗೂ ಬನ್ನಿ ವಿನಿಮಯ ಕಾರ್ಯಕ್ರಮವು ಪರಸ್ಪರ ಸೌಹಾರ್ದತೆ, ಪ್ರೀತಿ-ವಿಶ್ವಾಸ ಮತ್ತು ಸಂಬಂಧಗಳನ್ನು ಬೆಸೆಯುವ ಸಂಪ್ರದಾಯಬದ್ಧ ಹಬ್ಬವಾಗಿದೆ ಎಂದು ದೇವರ ಹಿಪ್ಪರಗಿ ಮತ ಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಹೇಳಿದರು.

ಗುರುವಾರರಂದು ಮತಕ್ಷೇತ್ರದ ಕುದರಿ ಸಾಲವಾಡಗಿ ಗ್ರಾಮದ ತಮ್ಮ ಶಾಸಕರ ಗೃಹ ಕಚೇರಿಯಲ್ಲಿ ಆಯೋಜಿಸಿದ್ದ ಬನ್ನಿ ವಿನಿಮಯ ಕಾರ್ಯಕ್ರಮದಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ ವಿವಿಧ ಇಲಾಖಾ ಅಧಿಕಾರಿ ವರ್ಗದವರು ಮತ್ತು ಸಾವಿರಾರು ಕಾರ್ಯಕರ್ತರು ಹಾಗೂ ಅಭಿಮಾನಿಗಳೊಂದಿಗೆ ಬನ್ನಿ ವಿನಿಮಯ ಮಾಡಿಕೊಂಡು ಅವರು ಮಾತನಾಡಿದರು.ಈ ಸಂದರ್ಭದಲ್ಲಿ ವಿವಿಧ ಇಲಾಖಾ ಅಧಿಕಾರಿಗಳು, ಶಾಸಕರ ಸಹೋದರ ಸಚೀನಗೌಡ ಪಾಟೀಲ, ಜೆಡಿಎಸ್ ತಾಲೂಕು ಅಧ್ಯಕ್ಷ ಮಡುಸಾಹುಕಾರ ಬಿರಾದಾರ, ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದು, ಶಾಸಕರೊಂದಿಗೆ ಬನ್ನಿ ವಿನಿಮಯ ಮಾಡಿಕೊಂಡು ಹಬ್ಬದ ಶುಭಾಶಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR